Sri D. Deveraja Urs. (Chief Minister):—The other day I said that I would make a statement after making enquiries. I am going to make the statement tomorrow.

MYSORE STATE CIVIL SERVICES (REGULATION OF PROMOTION PAY AND PENSION) BILL, 1973 MOTION TO CONSIDER.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ):—ನಾನು ನಿನ್ನೆ ಮಾತನಾಡುವಾಗ, ಈ ಬಡ್ತಿ ಕ್ರಮವನ್ನು ಮಾಡತಕ್ಕ ಕೆಲಸದಲ್ಲಿ ಹಿಂದಿನ ಪ್ರಮುಖ ಅಧಿಕಾರಿಗಳ ಅಚಾತುರ್ಯದಿಂದ ರಾಜ್ಯದ ಬೊಕ್ಕಸಕ್ಕೆ 5 ಕೋಟಿ ರೂಪಾಯಿನಷ್ಟು ನಷ್ಟವಾಗುವ ಪ್ರಶ್ನೆ ಬಂದಿದೆ ಎಂದು ಪ್ರಸ್ತಾಪ ಮಾಡಿದ್ದೇನೆ. ಹಿಂದೆ ಒಂದು ಕ್ರಮವನ್ನು ಅನುಸರಿಸದೇ ನಿಯಮಾವಳಿಗಳನ್ನು ಅನುಸರಿಸದೇ ಬಡ್ತಿ ಮಾಡಿ ಇವತ್ತು ಅನಾವಶ್ಯಕವಾಗಿ ನೌಕರರು ಕೋರ್ಟಿಗೆ ಹೋಗಿ ಪರಿಹಾರ ಪಡೆಯುವ ಸಂದರ್ಭ ಬಂದಿದೆ. ಮೆಡಿಕಲ್ ಕಾಲೇಜುಗಳಲ್ಲಿ ಇದ್ದಂಥಾ ಎಲ್ಲಾ ವಿಭಾಗದ ನೌಕರರ ಬಡ್ತಿ ವಿಷಯದಲ್ಲಿ ಇವತ್ತು ಸಾಕಾದಷ್ಟು ಅನ್ಯಾಯವಾಗಿದೆ ಎನ್ನುವ ವಿಷಯವನ್ನು ನನ್ನ ಗಮನಕ್ಕೆ ತಂದರು. ನಾನು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಮೆಡಿಕಲ್ ಕಾಲೇಜುಗಳಲ್ಲಿ ಮಾಡಿದಂಥ ಸೀನಿಯಾರಿಟಿ ಲಿಸ್ಟನ್ನು ವಜಾ ಮಾಡಿ ಹೊಸ ಸೀನಿಯಾರಿಟಿ ಲಿಸ್ಟ್ ಮಾಡಬೇಕೆಂದು ಇಲಾಖೆಗೆ ಕಳುಹಿಸಿದ್ದೇವೆ. ಈ ಮಧ್ಯದಲ್ಲಿ ಪೋಸ್ಟ್‌ಗಳನ್ನೂ ಖಾಲಿ ಬಿಡುವುದಕ್ಕೆ ಆಗುವುದಿಲ್ಲ ಅವುಗಳಿಗೆ ಟೆಂಪರರಿ ಆಗಿ ಬಡ್ತಿ ಕೊಟ್ಟು ಫಿಲ್ ಅಪ್ ಮಾಡಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಈ ರೀತಿ ಮಾಡಿದರೆ ಏನು ಆಗುತ್ತದೆಂದು ಹಂಗಾಮಿಯಾಗಿ ಯಾರಿಗಾದರೂ ಬಡ್ತಿ ಕೊಟ್ಟು ಮೇಲಿನ ಹುದ್ದೆಗೆ ನೇಮಿಸಿದರೆ ಸೀನಿಯಾರಿಟಿ ಪ್ರಕಾರ ಪ್ರಮೋಷನ್ ಕೊಡತಕ್ಕ ಕಾಲದಲ್ಲಿ ಆ ಹುದ್ದೆಗೆ ಅರ್ಹರೆಂದು ಪರಿಗಣಿಸಿದರೆ ಅವರು ವಾಪಸ್ಸು ಬರಬೇಕಾಗುತ್ತದೆ.

ಈಗ ಒಂದು ಸಾರಿ ಮೇಲೆ ಹೋದವರು ವಾಪಸ್ ಬರುವುದಿಲ್ಲ. ಆದುದರಿಂದ ಎಲ್ಲಿಯವರೆಗೆ ಸೀನಿಯಾರಿಟಿ ಲಿಸ್ಟ್ ಫೈನಲ್ ಆಗುವುದಿಲ್ಲವೋ, ಅಲ್ಲಿಯವರೆಗೆ ಹಂಗಾಮಿಯಾಗಿ ಆಗಲಿ, ಇನ್ನು ಯಾವುದೇ ವಿಧದಲ್ಲಿ ಆಗಲಿ ಪೋಸ್ಟ್ಸ್ ಖಾಲಿ ಇವೆ ಎನ್ನುವ ಕಾರಣದಿಂದ ಬಡ್ತಿ ಕೊಡುವ ಕೆಲಸ ನಿಲ್ಲಿಸಬೇಕು. ಬಡ್ತಿ ಕೊಡುವ ಸಂದರ್ಭದಲ್ಲಿ ಪ್ರಭಾವ ಉಪಯೋಗಿಸಿ ಮೇಲಕ್ಕೆ ಬರುವುದಕ್ಕೆ ಅವಕಾಶ ಇದೆ. ಬಡ್ತಿ ಯಾರಿಗೆ ಕೊಟ್ಟಿದ್ದೀರಿ, ಆತನನ್ನು ವಾಪಸ್ ಹಿಂದಕ್ಕೆ ಕಳುಹಿಸಿ, ಇನ್‌ಚಾರ್ಜ್ ಮಾಡಿ, ಕೆಲಸವನ್ನು ನಿರ್ವಹಿಸಬೇಕಾಗುತ್ತದೆ.

2.00 P. M.

ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).— ಯಾರಿಗೂ ಬಡ್ತಿ ಕೊಟ್ಟಿಲ್ಲ. ಎಲ್ಲಾ ಇನ್‌ಚಾರ್ಜ್ ಅರೇಂಜ್‌ಮೆಂಟ್ಸ್ ಮಾಡಿರುವುದು.

Unfortunately in the Medical Department this cadre and recruitment rules have not been finalised That is the difficulty. If there is a seniority list prepared and if we are to go according to that list there will be no difficulty. But the seniority list particularly in the Branch of Medicine is not available. I have asked the Commissioner and the Secretary to take it up. We have constitued a high power Committee and they are asked to look into the seniority of these officers and they have been asked to give a list.

ಶ್ರೀ ಎಚ್. ಡಿ. ದೇವೇಗೌಡ.—ಈ ಬಿಲ್ಲಿನ ಬಗ್ಗೆ ನಿಮ್ಮ ಅಭಿಪ್ರಾಯ ಏನು ?

ಶ್ರೀ ಎಚ್. ಸಿದ್ದವೀರಪ್ಪ.—ಈ ಬಿಲ್ ತಂದಿರುವುದು ಬಹಳ ಒಳ್ಳೆಯದು.

It is very necessary. I share your views that nobody should be allowed to have it in a manner so as to jeoperdise the interest of others.

ಇದರಲ್ಲಿ ಡಾಕ್ಟರ್ಸ್ ನಾನು ಸೀನಿಯರ್, ನಾನು ಸೀನಿಯರ್ ಎಂದು ಬರುತ್ತಾರೆ. ಯಾರು ಸೀನಿಯರ್, ಯಾರು ಜೂನಿಯರ್ ಎಂದು ತೀರ್ಮಾನವಾಗಬೇಕು. ತೀರ್ಮಾನವಾಗದೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ.

Therefore in all cases of vacancies where a number of posts have been created, as a matter of fact the Indian Medical Council asked me to create a number of posts. I have not yet posted because it has yet to be examined. I can assure the House that nothing would be done to cause injury to others.

ಈಗ ಲಾಂಜಿನಲ್ಲಿ ಕೆಲವರು ನಿಮ್ಮ ಹತ್ತಿರ ಇದ್ದಾರೆ. ನನಗೆ ಗೊತ್ತು. ಅವರ ಮೇಲೆ ಏನೇನು ಮಾಡಬೇಕು, ಯಾವ ರೀತಿ ಮಾಡಬೇಕು ಎಂದು. ನಾನು ಎಲ್ಲಾ ನೋಟು ಮಾಡಿಕೊಂಡಿದ್ದೇನೆ.

They have no right to go on canvassing like this.

ಶ್ರೀ ಎಂ. ಎಸ್. ಕೃಷ್ಣನ್.—ಏನು ಕ್ಯಾನ್‌ವಾಸ್ ಮಾಡುವುದು ?

ಶ್ರೀ ಎಚ್. ಸಿದ್ದವೀರಪ್ಪ.—"ನನಗೆ ಅನ್ಯಾಯವಾಗಿದೆ, ಅದನ್ನು ಮಾಡಿಸಿರಿ" ಎಂದು ಆ ರೀತಿ ಹೋಗುವುದು ನ್ಯಾಯವಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕೆಲವು ಸಂದರ್ಭಗಳಲ್ಲಿ ಕ್ಯಾನ್‌ವಾಸ್ ಮಾಡುವುದರಲ್ಲಿ ನ್ಯಾಯ ಇದೆ.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಲ್ಪ ಮಟ್ಟಿಗೆ ಇರಬಹುದು.

I can assure the Hon. Members on both sides that nothing would be done to cause injury to others.

ಎಲ್ಲರೂ ಇನ್‌ಚಾರ್ಜ್ ಇದ್ದಾರೆ. ಅಫಿಷಿಯೇಟಿಂಗ್ ಅರೇಂಜ್‌ಮೆಂಟ್ಸ್ ಮಾಡಿಲ್ಲ.

It does not create any interest or right in him for that office.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗೆ ರೆವಿನ್ಯೂ ಇಲಾಖೆಯಲ್ಲಿ ಇರತಕ್ಕ ಒಂದನೇ ದರ್ಜೆ ಗುಮಾಸ್ತರು ಮತ್ತು ಫಸ್ಟ್ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರ್ ಹುದ್ದೆಗೆ ಬಡ್ತಿ ಕೊಡುವ ಕ್ರಮದಲ್ಲಿ ಅನೇಕ ಲೋಪದೋಷಗಳು ನಡೆದಿವೆ. ಒಂದು ಇಲಾಖೆಯಲ್ಲಿ 12,000 ಜನ ಇವತ್ತಿನವರೆಗೂ................

ಶ್ರೀ ಡಿ. ಕೆ. ನಾಯ್ಕರ್.—(ನ್ಯಾಯ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಅದು ಅಗಿಲ್ಲ ಎಂದು ಹೇಳಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ರೆವಿನ್ಯೂ ಇಲಾಖೆಯಲ್ಲಿರತಕ್ಕ ಮೊದಲನೇ ದರ್ಜೆ ಗುಮಾಸ್ತರು, ಹಾಗೇ ಅಲ್ಲಿರತಕ್ಕ ರೆವಿನ್ಯೂ ಇನ್ಸ್‌ಪೆಕ್ಟರ್ ಇವರ ಬಡ್ತಿ ಕ್ರಮದಲ್ಲಿ ಸಾಕಷ್ಟು ವಿಳಂಬವಾಗಿದೆ. ವಿಳಂಬ ಮಾಡುವುದರ ಜೊತೆಗೆ ಅನೇಕ ತಾರತಮ್ಯವಾಗಿದೆ. ಇದಕ್ಕೆ ಕಾರಣ ಏನೆಂದರೆ, ಡಿವಿಜನಲ್ ಕಮಿಶನರ್ ಲೆವಲಿನಲ್ಲಿ ಮಾಡಿರತಕ್ಕ ಶಿಫಾರಸುಗಳನ್ನು ಸ್ಕ್ರೀನಿಂಗ್ ಕಮಿಟಿಯವರು ಸಮಗ್ರವಾಗಿ ವಿಚಾರಮಾಡದೆ, ಕೆಲವರ ಒತ್ತಾಯಕ್ಕೆ ಒಳಗಾಗಿ, ಈ ರೀತಿ ಹೆಚ್ಚು ಕಡಿಮೆ ಮಾಡಿರುವುದರಿಂದ ಉತ್ತಮವಾಗಿ ಸೇವೆಸಲ್ಲಿಸಿರತಕ್ಕ ಅನೇಕ ಜನರಿಗೆ ಬಡ್ತಿ ಸಿಕ್ಕದೆ ಅನ್ಯಾಯವಾಗಿದೆ. ಇದನ್ನು ಸರಿಪಡಿಸುವ ದೃಷ್ಟಿಯಿಂದ ರೆವಿನ್ಯೂ ವಿಭಾಗದಲ್ಲಿ ಯಾವ ತಾರೀಖಿನಿಂದ ಅವರ ಬಡ್ತಿ ಕ್ರಮದಿಂದ ಲೋಪದೋಷಗಳು ಪ್ರಾರಂಭವಾಗಿದೆಯೋ ? ಆ ತಾರೀಖಿನಿಂದ ಈ ಜನಕ್ಕೆ ಆದ ಬಡ್ತಿಯ ಕ್ರಮವನ್ನು ವಾಪಸ್ ಪಡೆಯಬೇಕು. ಇಲ್ಲದಿದ್ದರೆ ಅನುಕೂಲ ಪಡೆದು

(ಶ್ರೀ ಕಾಗೋಡು ತಿಮ್ಮಪ್ಪ)

ಕೊಂಡಿರುವವರು ಹೋಗಿಬಿಡುತ್ತಾರೆ, ಇನ್ನು ವ್ಯವಸಾಯ ಇಲಾಖೆಯಲ್ಲಿ ಆಗಿರುವ ಪ್ರಸಂಗ ಹೇಳಿದ್ದಾರೆ. ಅದು ಖಾತ್ರಿ ಆಗಿರುವುದು ಎಲ್ಲರೂ ಒಪ್ಪಿಕೊಳ್ಳುತ್ತಾರೆ, ಯಾರು ಯಾರು ಸೀನಿಯಾರಿಟಿ ಲಿಸ್ಟ್ ಆಖೈರು ಆಗದೆ ಬಡ್ತಿ ಪಡೆದಿದ್ದಾರೋ ಅವರಿಗೆ ಉನ್ನತ ಸ್ಥಾನದಲ್ಲಿ ಸಿಗುವ ಯಾವ ಸೌಲಭ್ಯ ಕೊಡುವುದಕ್ಕೆ ಹೋಗಬೇಡಿ. ಒಂದು ಸಾರಿ ಲಿಸ್ಟ್ ಆಖೈರು ಆಗುವವರೆಗೆ ಪ್ರಿಲಿಮಿನರಿ ಲಿಸ್ಟ್ ಪ್ರಕಾರ ಬಡ್ತಿ ಪಡೆಯುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಅನುಕೂಲ ಆಗುವುದಾದರೆ ಎಲ್ಲರೂ ಸಮನಾಗಿ ಅನುಕೂಲ ಪಡೆಯುತ್ತಾರೆ. ಪ್ರಯೋಜನ ಆಗುವುದಾದರೆ ಎಲ್ಲರಿಗೂ ಸಮನಾಗಿ ಪ್ರಯೋಜನ ಸಿಗುವ ಹಾಗೆ ಆಗುತ್ತದೆ. ಅದನ್ನು ಮಾಡಬೇಕು. ಜೊತೆಗೆ ಸರ್ವೆ ಇಲಾಖೆಯಲ್ಲಿ ಬಡ್ತಿ ಕ್ರಮದಲ್ಲಿ ಕೂಡ ಅನೇಕ ಲೋಪದೋಷಗಳು ಇವತ್ತು ನಡೆದಿವೆ. ಅಲ್ಲೂ ಕೂಡ ಇವತ್ತಿನವರೆಗೂ ಬಡ್ತಿಕ್ರಮ ಕ್ರಮಬದ್ಧವಾಗಿ ಆಗಿಲ್ಲ. ಅನೇಕ ಜನರಿಗೆ ಅನ್ಯಾಯವಾಗಿದೆ. ಸರ್ವೆ ಡಿಪಾರ್ಟ್‌ಮೆಂಟಿನ ಕೆಲವು ಡೈರೆಕ್ಟರ್ ಕಾಲದಲ್ಲಿ ವಿಪರೀತ ವರ್ಗಾವರ್ಗಿಗಳಲ್ಲಿ ಅನೇಕ ಲೋಪದೋಷಗಳು ಆಗಿ ಸರ್ವೆ ಸೆಟಲ್‌ಮೆಂಟ್ ಇಲಾಖೆ ಅತ್ಯಂತ ಕೆಟ್ಟ ಸ್ಥಿತಿಯಲ್ಲಿದೆ. ಇದನ್ನು ದುರಸ್ಥಿಪಡಿಸುವ ಕೆಲಸ ಇವತ್ತಿನವರೆಗೂ ಆಗಿಲ್ಲ. ಇತ್ತೀಚೆಗೆ ಇರುವ ಡೈರೆಕ್ಟರ್ ಟ್ರಾನ್ಸ್‌ಫರ್ ಆಗಿದ್ದಾರೆ. ಈ ಇಲಾಖೆಯನ್ನು ಕೂಡ ಸರಿಪಡಿಸಿ, ಆ ಜನಕ್ಕೆ ಆಗಿರತಕ್ಕ ಅನ್ಯಾಯವನ್ನು ಬಗೆಹರಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ಒಂದು ಮಾತು ಹೇಳಬೇಕಾಗಿದೆ. ಈ ಮಸೂದೆಯನ್ನು ಮಂಡಿಸುವುದರಿಂದ ತಾವು ಏನು ಹೇಳುತ್ತೀರಿ, ಹಿಂದೆ ಆಗಿರತಕ್ಕ ವಿಷಯಗಳಿಗೆ ಮಾತ್ರ ಇದು ಲಾಗು ಆಗತಕ್ಕದ್ದು ಎಂದು. ಮುಂದೆ, ಇವತ್ತು ಸೇವೆಗಳನ್ನು ನಿರ್ವಹಿಸತಕ್ಕ ವ್ಯವಸ್ಥೆ ಏನಿದೆ ಅದೇ ವ್ಯವಸ್ಥೆಯಲ್ಲಿ ಕಳೆದ 17 ವರ್ಷಗಳಿಂದ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಪ್ರತಿಯೊಂದು ಸಾರಿ ಶಾಸನ ಸಭೆ ಅಧಿವೇಶನದಲ್ಲಿ ಇದು ಸಾಕಷ್ಟು ರೀತಿಯಲ್ಲಿ ಚರ್ಚೆಯಾಗಿದೆ ಅನೇಕ ಸರ್ಕಾರಗಳು ಉತ್ತರ ಹೇಳಿದ ಸಂದರ್ಭ ಉಂಟು. 15—20 ವರ್ಷ ಕಾಲ ಚರ್ಚೆಮಾಡುವುದರಲ್ಲಿಯೇ ಮುಂದುವರಿಸಿಕೊಂಡು ಹೋಗಿ, ಈಗ ಹಿಂದೆ ಮಾಡಿರತಕ್ಕ ತಪ್ಪುಗಳನ್ನೆಲ್ಲ ತಪ್ಪಿಸುವುದಕ್ಕೆ ಇಂತಹ ಒಂದು ಕಾನೂನು ತಂದರೆ ಸಾಕು ಎಂದು ಇದ್ದಾರೆ ನೀವು ಇಲ್ಲದೇ ಇದ್ದರೆ, ಬರುವ ಸರ್ಕಾರ ಮಾಡಬಹುದು ಎಂದು ತಿಳಿದುಕೊಂಡಿದ್ದಾರೆ. ಅದಕ್ಕೆ ಅವಕಾಶ ಆಗಬಾರದು. ಪ್ರತಿವರ್ಷ ಬಡ್ತಿ ಕ್ರಮ, ಎಲ್ಲಾ ಇಲಾಖೆಯಲ್ಲಿ ಪರಿಶೀಲನೆಮಾಡುವ ಕ್ರಮ ಇಟ್ಟುಕೊಳ್ಳಬೇಕು. ಪ್ರತಿವರ್ಷ ಕೂಡ ಹೆಚ್ಚಿನ ಸೇವೆ ಸಲ್ಲಿಸಿ ಬಡ್ತಿ ಕ್ರಮಕ್ಕೆ ಅರ್ಹರು ಆಗಬಹುದು. ಎಲ್ಲಾ ಇಲಾಖೆಯ ಬಡ್ತಿ ಕ್ರಮಗಳಿಗೆ ಸೇವಾ ನಿಯಮಗಳನ್ನು ಪರಿಶೀಲನೆಮಾಡಿ, ಪರಿಷ್ಕರಣಮಾಡಿ, ಯಾರು ಯಾರು ಬಡ್ತಿಗೆ ಅರ್ಹರೋ ಅವರಿಗೆ ಬಡ್ತಿ ಮಾಡುವ ಕ್ರಮ

(ಶ್ರೀ ಕಾಗೋಡು ತಿಮ್ಮಪ್ಪ)

ಮಾಡಬೇಕು. ಯಾವ ಇಲಾಖೆಯಲ್ಲಿ ಪ್ರಮೋಷನಲ್ ಲಿಸ್ಟ್ ಫೈನಲೈಸ್ ಮಾಡುವುದಿಲ್ಲ ಅಂಥ ಸಂದರ್ಭದಲ್ಲಿ ನೀವು ಪ್ರತಿವರ್ಷ ಸಂಬಂಧಪಟ್ಟ ಇಲಾಖೆಯ ಮುಖ್ಯಾಧಿಕಾರಿಗಳ ಮೇಲೆ ಶಿಸ್ತಿನಕ್ರಮ ತೆಗೆದುಕೊಳ್ಳತಕ್ಕ ಅವಕಾಶ ಗಳನ್ನು ಈ ಕಾನೂನಿನಲ್ಲಿ ಅಳವಡಿಸಿಕೊಳ್ಳಬೇಕು.

Head of the departments should finalise the promotional list every year.

ಇದನ್ನು ಇಂಥ ಕಾನೂನಿನಲ್ಲಿ ಮಾಡಿದರೆ Head of the Departments ಗೆ ನಾಳೆ ಅದು ತನ್ನ ಮೈಮೇಲೆ ಬರುತ್ತದೆ, ತನ್ನ ಸ್ಥಾನಮಾನಕ್ಕೆ ಚ್ಯುತಿ, ಧಕ್ಕೆ ಬರುವ ಸಂಭವ ಉಂಟು ಎನ್ನುವ ಹೆದರಿಕೆ ಬರುತ್ತದೆ. ಖಾಯಂ ಆಗಿ, ಖಚಿತವಾಗಿ ಪ್ರತಿ ವರ್ಷದ ಪ್ರಮೋಷನಲ್ ಲಿಸ್ಟನ್ನು ಎಲ್ಲಾ ಯಥಾವತ್ತಾಗಿ ಮಾಡಿ ಸರ್ಕಾರಕ್ಕೆ ಕಳುಹಿಸುವ ಪ್ರಯತ್ನ ಮಾಡುತ್ತಾರೆ.

ಇಲ್ಲದೇ ಹೋದರೆ ಇದು ಏನಾಗುತ್ತದೆ ಎಂದರೆ, ಇನ್ನೂ ನಿಧಾನ ಮಾಡಿಕೊಂಡು ಹೋದರೆ ಸಂಬಂಧಪಟ್ಟ ಗುಮಾಸ್ತರ ಮೇಲೆ ಹಾಕುತ್ತಾರೆ. ಹೆಡ್ ಆಫ್ ದಿ ಡಿಪಾರ್ಟಮೆಂಟ್ ಈ ಬಗ್ಗೆ ಕೇಳಿದರೆ ತಯಾರಾಗುತ್ತಾ ಇದೆ ಎಂದು ಹೇಳುತ್ತಾರೆ, ಒಂದು ವೇಳೆ ಕೇಳದೆ ಇದ್ದರೆ ಇದು ಹಾಗೆಯೇ ಕೂತಿರುತ್ತದೆ, ಈ ರೀತಿ ನಡೆಯುತ್ತಾ ಇದೆ. ಆದುದರಿಂದ ನಾನು ಹೇಳುವುದು ಏನೆಂದರೆ ಈ ಬಗ್ಗೆ ಅವರನ್ನು ಸಾಕಷ್ಟು ಹಿಡಿತದಲ್ಲಿಟ್ಟುಕೊಳ್ಳುವ ಹಾಗೆ ಮಾಡದೇ ಹೋದರೆ ಅವರಿಗೆ ಎಷ್ಟು ಕಾಲಾವಕಾಶ ಬೇಕೋ ಅಷ್ಟು ಕಾಲಾವಕಾಶವನ್ನು ಉಪಯೋಗಿಸಿಕೊಳ್ಳುತ್ತಾರೆ. ಈರೀತಿ ತಡವಾಗಿ ಅನೇಕ ನೌಕರರು ಕೋರ್ಟಿಗೆ ಹೋಗುವ ಸಂದರ್ಭ ಬಂದಿದೆ. ಕೆಲವು ಸಂದರ್ಭದಲ್ಲಿ ಸತ್ತಮೇಲೆ ಪೆನ್‌ಷನ್ ಹೋಗುವ ಸಂದರ್ಭ ಇದೆ. ಜೀವಂತವಿದ್ದಾಗ ಬರುವುದಿಲ್ಲ. ಒಂದುವೇಳೆ ಆ ರೀತಿ ಆದರೆ ಅವರ ವಾರಸುದಾರರಿಗೆ ಹೋಗುವಂತೆ ಮಾಡಬೇಕು. ಆದರೆ ಇದನ್ನೇ ಖಾಯಂ ಆಗುವಂತೆ ಅವಕಾಶ ಮಾಡಿಕೊಡಬೇಡಿ. ಆ ಮನುಷ್ಯನಿಗೆ ಸಂಬಂಧಪಟ್ಟ, ಬಡ್ತಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳೂ ಕೂಡ ಅವನ ಜೀವಂತ ಕಾಲದಲ್ಲಿಯೇ ನಿರ್ಧಾರವಾದರೆ ಸಂಬಂಧಪಟ್ಟ ಸರ್ಕಾರಕ್ಕೋ ಕೋರ್ಟಿಗೋ ಹೋಗಿ ಅವನು ನ್ಯಾಯವನ್ನು ಪಡೆಯುತ್ತಾನೆ. ಅವನಿಗೆ ರಾಜ್ಯಾಂಗ ಬದ್ಧವಾಗಿ ಸಮಾನವಾದ ಎಲ್ಲಾ ಹಕ್ಕುಗಳೂ ಇವೆ. ಅವನಿಗೆ ಈ ಪ್ರಜಾಪ್ರಭುತ್ವದಲ್ಲಿ ತನ್ನ ಎಲ್ಲಾ ಹಕ್ಕನ್ನೂ ಕೂಡ ಚಲಾಯಿಸುವುದಕ್ಕೆ ಸಾರ್ವಭೌಮತ್ವವನ್ನು ಪಡೆದಿದ್ದಾನೆ, ಮೇಲಾಗಿ ನ್ಯಾಯಾಲಯ ಇದೆ. ಅವನಿಗೆ ಏನೇನು ಸವಲತ್ತುಗಳನ್ನು ಸರ್ಕಾರದಿಂದ ಸಿಗಬೇಕೋ ಆ ಹಕ್ಕನ್ನು

(ಶ್ರೀ ಕಾಗೋಡು ತಿಮ್ಮಪ್ಪ)

ಚಲಾಯಿಸುವುದಕ್ಕೆ ಅವನು ಜೀವಂತನಾಗಿದ್ದಾಗಲೇ ಇದನ್ನು ಮಾಡುವುದಕ್ಕೆ ಸಾಧ್ಯವಾಗದೇ ಹೋದರೆ ಅವನು ಹುಟ್ಟಿ ಬೆಳೆವದ್ದು ಏತಕ್ಕೆ? ಈ ಬಡ್ತಿಯ್ಯಾವಾಗಲೂ ಒಂದು ಕ್ರಮಬದ್ಧವಾಗಿ ನಡೆಯಬೇಕು. ಪ್ರತಿವರ್ಷವೂ ಕೂಡ ಈ ಭಡ್ತಿಗೆ ಸಂಬಂಧಪಟ್ಟ ವಿಷಯಗಳನ್ನು ಪರಿಷ್ಕರಣೆ ಮಾಡಿ, ವಿಮರ್ಶೆ ಮಾಡತಕ್ಕಂಥ ಕಾನೂನನ್ನು ಇಲ್ಲಿ ಅಳವಡಿಸಬೇಕು. ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಜೊತೆಗೆ ಈ ಮಸೂದೆಯಿಂದ ಮುಂದೆ ಆಗತಕ್ಕಂಥ ಸೇವಾ ಬಡ್ತಿ ಕ್ರಮ ಏನು ಇದೆ ಅದನ್ನು ನ್ಯಾಯವಾಗಿ ಒದಗಿಸಿಕೊಡಬೇಕು. ಒಂದು ವೇಳೆ ಬಡ್ತಿ ಕೊಡುವಾಗ ಮುಂದೆ ಏನಾದರೂ ಲೋಪದೋಷಗಳನ್ನು ಮಾಡಿದ್ದರೆ ಅದನ್ನು ಪ್ರಸ್ತಾಪ ಮಾಡತಕ್ಕಂಥ ಹಕ್ಕು ನೌಕರರಿಗೆ ಇರಬೇಕು. ಅವರಿಗೆ ಇರತಕ್ಕಂಥ ಈ ಮೂಲಭೂತವಾದ ಹಕ್ಕನ್ನು ಯಾರೂ ಕಸಿದುಕೊಳ್ಳಬಾರದು. ಅವರಸೇವಾ ಬಡ್ತಿಗೆ ಅನ್ಯಾಯಗಳು ಆಗದಂತೆ ನೋಡಿಕೊಂಡು ಹೋಗಲು ಅವಕಾಶ ಮಾಡಿ ಕೊಡಬೇಕು. ಮತ್ತು ಹಿಂದೆ ನಡೆದಂಥ ಘಟನೆಯನ್ನು ಗಮನದಲ್ಲಿಟ್ಟುಕೊಂಡು ಈ ಕೆಲಸ ಮಾಡಬೇಕು. ಮತ್ತು ಈ ಹಿಂದೆ ಕೊಳೆತು ರಾಶಿ, ರಾಶಿ ಗಟ್ಟಲೆ ಬಿದ್ದಿರತಕ್ಕಂಥ ಕೇಸುಗಳನ್ನು ಇನ್ನು $1—1\frac{1}{2}$ ವರ್ಷದಲ್ಲಿ ಪೂರ್ಣಗೊಳಿಸಿ ಒಂದು ಹಂತಕ್ಕೆ ಬಂದು ಮುಟ್ಟುತ್ತೇವೆ ಎನ್ನುವ ಆಶ್ವಾಸನೆ ಕೊಡಬೇಕು. ಇಲ್ಲದೇ ಹೋದರೆ ಸಂಬಂಧಪಟ್ಟ ಮಂತ್ರಿಗಳು ಹೊಣೆಗಾರರಾಗಬೇಕು. ಈಗ ಇದಕ್ಕೆ ಯಾರೂ ಕೂಡ ಜವಾಬ್ದಾರರಾಗಲು ತಯಾರಿಲ್ಲ, ಇವರು ಹಿಂದಿನವರ ಮೇಲೆ ಹೇಳುತ್ತಾರೆ. ಅವರ ಅವರ ಹಿಂದಿನವರ ಮೇಲೆ ಹೇಳುತ್ತಾರೆ. ಈ ರೀತಿ ಆಗಬಾರದು. ಆದುದರಿಂದ ಈ ಒಂದು ಕಾನೂನು ಆದ ಮೇಲಾದರೂ ಕೂಡ ಈ ನೌಕರಸೇವಾ ಬಡ್ತಿಯನ್ನು ಒಂದು ವರ್ಷದೊಳಗೆ ಪೂರೈಸುತ್ತೇವೆ ಅನ್ನುವ ಒಂದು ಅಶ್ವಾಸನೆ ಕೊಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇದನ್ನು ಪೂರೈಸತಕ್ಕಂಥಾದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯನ್ನು ಸರ್ಕಾರ ಕಳಚಿಕೊಂಡರೆ ಆಗುವುದಿಲ್ಲ. ಇದನ್ನು ಪೂರೈಸುವುದಾದರೆ ಅವರ ನೈತಿಕ ಮಟ್ಟವನ್ನು ಉಳಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದರ ಜೊತೆಗೆ ಈ ರಾಜ್ಯದ ನೌಕರರಿಗೆ ಯಾವ ರೀತಿಯಾಗಿಯೂ ಅನಾನುಕೂಲ ಮತ್ತು ಅನ್ಯಾಯವಾಗದ ರೀತಿಯಲ್ಲಿ ರಕ್ಷಣೆ ನೀಡಬೇಕು ಎಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ, ಇದು ಒಂದು ಕರಾಳ ಶಾಸನವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿ ಈ ಶಾಸನವನ್ನು ವಿರೋಧಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

SRI B. B SAYANAK (Belgaum).—Madam Speaker, I rise to oppose this Bill. I endorse the opinion of some of the hon. members who have said that this is a Black Bill. After the States Reorganisation, there is not a final seniority list prepared with the result some junior officers have been promoted. Juniors have been promoted by passing the seniority and merit of other persons. Consequent upon the supersession of their seniority some of the officers have gone in writ petitions to the High Court and they have obtained justice. The Government have gone in appeal to the Supreme Court. I am sorry to say that the aggrieved persons though they have fought tooth and nail for their survival and have established their right. Now the Government is not going to do full justice to them. Some of the officers who had gone to High Court, have brought judgements in their favour and as a consequence thereof they have drawn their arrears of salary and some officials are in the process of getting justice. In the meanwhile. the Government has brought this Bill in order to prevent them from getting their legitimate claims. I cannot understand why discrimination is being made in respect of few officials by introducing this Bill.

Another thing, if the Supreme Court is going to confirm the decision of the High Court, what will be the fate of this Bill, whether the Government is going to introduce another Bill in respect of these public servants? According to me, Government is making an experiment whether the people or the Assembly or the Civil servants are going to accept this Bill or not. If after passing of this Black Bill, the Civil Servants were to approach the High Court and if the High Court were to give a decision saying that this Bill against the constitution, then what will be the fate of this Bill? This is a specific question which I want to pose to Government for an answer.

Another thing in some of the departments, the Cadre and Recruitment Rules have not been framed even after 17 years of reorganisation of the State. I want to know

(SRI B. B. SAYANAK)

why this is so? Whether the Government is sincere to give justice to all the senior and meritorious persons?

According to clause (2) (2) of this Bill, the effect of this Bill will be a retrospective one. That means this Bill comes into force from 1-11-56. If that is the case, so many persons, some of them who have retired and some of them have died, what will be their fate? Some provision has been made in this Bill protecting the interests of those persons who have retired without getting promotions and those who have died; but those persons who cannot get any seniority or promotion during their life time, no provision has been made.

And, now, after their death and retirement, you are going to do some justice. I do not say full justice, but some justice is being done, according to you.

Regarding the arrears, as my hon. friend Mr. Krishnan said if you pay the arrears to the persons who got favourable decisions of the High Court, what harm is there? You are not the sufferer but the public is the sufferer. So, you must give arrears to those persons, who got a decision from the High Court.

With these words, I oppose this Bill and thank the Chair for having given me an opportunity to speak.

**ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಕಾನೂನು ಮಂತ್ರಿಗಳು ತಂದಿರತಕ್ಕ ಈ ಬಿಲ್ಲನ್ನು ನಾನು ಸಂಪೂರ್ಣ ಸ್ವಾಗತಿಸುತ್ತ ಶ್ರೀ ಕಾಗೋಡು ತಿಮ್ಮಪ್ಪನವರು ಮಾಡಿದ ಭಾಷಣದ ಬಗ್ಗೆ ಮತ್ತು ವಿರೋಧವನ್ನು ವ್ಯಕ್ತಪಡಿಸಿದ್ದಕ್ಕೆ ಸಖೇದಾಶ್ಚರ್ಯ ಪಡುತ್ತೇನೆ. ಅದಕ್ಕೆ ಕಾರಣವಿಷ್ಟೆ. ಶ್ರೀ ತಿಮ್ಮಪ್ಪನವರು ಸೆಲೆಕ್ಟ್ ಸಮಿತಿಯಲ್ಲಿ ಇದ್ದವರು. ಕ್ರಾಂತಿ ಕಾರಕ ಭೂಸುಧಾರಣಾ ತಿದ್ದುಪಡಿ ವಿಧೇಯಕ ತಂದಂಥ ಜನ, ಯಾರು ದುಡಿಮೆ ಯಿಂದ ಕಷ್ಟಪಟ್ಟು ಸಾವಿರಾರು ರೂಪಾಯಿ ಇನ್‌ವೆಸ್ಟ್ ಮಾಡಿ ಸ್ವಂತ ಸಾಗು ವಳಿ ಮಾಡಿಕೊಂಡು ಬಂದಿದ್ದರೋ ಅಂಥವರಿಗೆ ಕಂದಾಯದ 10–15 ಪಟ್ಟು ಕಾಂಪೆನ್‌ಸೇಷನ್ ಕೊಟ್ಟು ಬಿಡುಗಡೆ ಮಾಡಬೇಕು ಎಂದು ಹೇಳಿದಂಥ ಜನ, ಇಲ್ಲಿ ಏನೂ ಕೆಲಸ ಮಾಡದೆ ಅದರ ಪ್ರತಿಫಲವನ್ನು ಮಾತ್ರ ತೆಗೆದುಕೊಳ್ಳುತ್ತಿರುವ

(ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್)

ವರ ಬಗ್ಗೆ ಅನುಕಂಪ ವ್ಯಕ್ತಪಡಿಸಿರುವುದಕ್ಕೆ ಅವರಿಗೆ ಶಹಭಾಸ್ ಕೊಡುತ್ತೇನೆ; ಇದು ನಿಜವಾದ ಸಮಾಜವಾದ. ಏಕೆಂದರೆ ಯಾರು ದುಡಿಮೆಯ ಬಗ್ಗೆ ಮಾತ ನಾಡುತ್ತಾರೆ, ಯಾರು ಕಷ್ಟಪಡುತ್ತಾರೆ ಅವರ ಬಗ್ಗೆ ಹೆಚ್ಚಿನ ಸವಲತ್ತನ್ನು, ಹೆಚ್ಚಿನ ಪರಿಹಾರವನ್ನು ಕೊಡಬೇಕು ಎಂದು ಹೇಳಬೇಕೋ ಅಂಥವರು ದುಡಿಮೆ ಇಲ್ಲದೆ ವರ್ಷಾನುಗಟ್ಟಲೆ ಕಾಲ ಕುಳಿತುಕೊಂಡು ಯಾವುದೋ ಕೋರ್ಟ್ ಆಜ್ಞೆಯ ಮುಸುಕಿನಲ್ಲಿ ಪರಿಹಾರ ಪಡೆಯುವುದಕ್ಕೆ ಹೊರಟಿರುವ, ಈ ರಾಜ್ಯದ ಬೊಕ್ಕಸವನ್ನು ಬರಿದು ಮಾಡಲು ಹೊರಟಿರುವ ಅಧಿಕಾರಿಗಳ ಬಗ್ಗೆ ವಕಾಲತ್ತು ವಹಿಸುತ್ತಿರುವ ಅವರಿಗೆ ನಾನು ಎಷ್ಟು ಮೆಚ್ಚಿದರೂ 'ಸಾಲದು. ಶ್ರೀ ಅಂಬಲ್ ನಲ್ಲಿ ಇದರ ಉದ್ದೇಶವಾದರೂ ಏನು ಎನ್ನುವುದನ್ನು ಕಾನೂನು ಮಂತ್ರಿಗಳು ವಿಶದವಾಗಿ ಹೇಳಿದ್ದಾರೆ. 1956 ರಿಂದ ಇಲ್ಲಿಯವರೆಗೂ ಯಾವ ಜವಾಬ್ದಾರಿ ಯನ್ನೂ ವಹಿಸಿಕೊಳ್ಳದೆ, ಕೆಳವರ್ಗದಲ್ಲಿ ಇದ್ದು ಯಾವುದೋ ಒಂದು ಕೋರ್ಟ್ ಆಜ್ಞೆಗೆ ಅನುಸಾರವಾಗಿ ಅಲ್ಲಿಂದ ಇಲ್ಲಿಯವರೆಗೂ ಆತನಿಗೆ ಗುರುತರವಾದ ಜವಾಬ್ದಾರಿ ಇತ್ತು ಎಂದು ತಿಳಿದುಕೊಂಡು ಪರಿಹಾರ ಕೊಡಬೇಕು ಎಂದರೆ ಈ ದೇಶಕ್ಕಂತೂ ಸಾಧ್ಯವಿಲ್ಲ. ಇದು ರಾಜಮಹಾರಾಜರ ಬೊಕ್ಕಸವಲ್ಲ, ರೈತವರ್ಗ ಕೊಟ್ಟಿರತಕ್ಕ ಹತ್ತಿಪ್ಪತ್ತು ರೂಪಾಯಿಗಳ ಕಂದಾಯದ ಮೂಲಕ ಬಂದಿರತಕ್ಕ ದುಡ್ಡನ್ನು ಕೆಲವಾರು ನೌಕರರಿಗೆ ಸವಲತ್ತು ಕೊಡಬೇಕು, ಅವರಿಗೆ ಕೊಡಬೇಕು ಎನ್ನುವ ವಾದವನ್ನು, ವಕೀಲಿಯನ್ನು ಏಕೆ ನಮ್ಮ ಮಿತ್ರರು ಹಿಡಿದಿದ್ದಾರೋ ನನಗೆ ತಿಳಿಯದು.

ಶ್ರೀ ಎಚ್. ಡಿ. ದೇವೇಗೌಡ :—ನಮಗೆ ಒಂದೊಂದು ಸಾವಿರ ರೂಪಾಯಿ ಫಿಕ್ಸ್ ಆಗಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ಕಂಟೆಂಟ್ ಆದೀತು, ನಾಳೆಯ ದಿವಸ ಪ್ರಿವಿಲೇಜಿಗೆ ಹಾಕುತ್ತೀರಿ ಎಂದು ಹೇಳಲಿಲ್ಲ. ನೀವೇ ಒಪ್ಪಿ ಕೊಂಡ ಮೇಲೆ ನನ್ನ ತಕರಾರಿಲ್ಲ.

ಈ ಹೊತ್ತು ಯಾವ ಪ್ರಮೋಷನ್ ಆಗಲೀ, ಯಾವ ಒಂದು ಅಧಿಕಾರಕ್ಕೆ ಕೂರಿಸಬೇಕಾಗಲೀ, ಅವನ ಯೋಗ್ಯತೆ ಪ್ರಧಾನವಾಗಿರಬೇಕು. ಕೇವಲ ಇಂತಿಷ್ಟು ವರ್ಷ ಕೆಲಸ ಮಾಡಿದ್ದಾನೆ ಎಂದು ಅವನಿಗೆ ಒಂದು ಹುದ್ದೆಯನ್ನು ನಿರ್ಮಾಣ ಮಾಡಿ ಕೊಡುವುದು ನಿಜವಾಗಿಯೂ ಕೆಲಸಕಾರ್ಯ ತೆಗೆದುಕೊಳ್ಳತಕ್ಕ ರೀತಿಯಲ್ಲ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಒಂದು ನ್ಯೂನತೆ ಇದರಲ್ಲಿ ಇರುತ್ತದೆ. 'ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಬಂತು' ಎನ್ನುವ ಗಾದೆ ಇದೆ. ಅದರಂತೆ ಇದರಲ್ಲಿರುವ ಒಂದು ವಿಚಾರದಲ್ಲಿ ದುರುಪಯೋಗವಾಗುವುದಕ್ಕೆ ಕೂಡ ಸಾಧ್ಯವಿದೆ. ಯಾವನೋ ಒಬ್ಬ ಅಧಿಕಾರಿ ಚೆನ್ನಾಗಿ ಕೆಲಸ ಮಾಡುತ್ತಿದ್ದರೂ ಕೂಡ ಮೇಲಿನ ಅಧಿಕಾರಿಗೆ ಅವನ ಮೇಲೆ ವಿರೋಧವಿದ್ದರೆ ಈ ಬಿಲ್ಲಿನ ರಕ್ಷಣೆ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್).

ಪಡೆದು ಅವನಲ್ಲಿರತಕ್ಕ ಯೋಗ್ಯತೆಯನ್ನು ಬದಿಗೊತ್ತಿ ಅವನ ಕೈಕೆಳಗೆ ನೌಕರಿ ಮಾಡುವವನನ್ನು ಮೇಲೆ ತರುವುದಕ್ಕೆ ಅವಕಾಶ ಇದರಲ್ಲಿ ಆಗುತ್ತದೆ. ಅದನ್ನು ಸಂಬಂಧಪಟ್ಟವರು, ಮೇಲೆ ಯಾರು ಅಧಿಕಾರ ಸೂತ್ರ ಹಿಡಿದಿದ್ದಾರೆ ಅವರು ಕ್ಷ ಕಿರಣ ಬೀರಿ ಯಾವತ್ತೂ ನಿಗಾ ವಹಿಸಬೇಕಾಗುತ್ತದೆ, ಇದು ವಿಧಿ ವಿಪರ್ಯಾಸ ಎಂದು ಹೇಳಬಹುದು.

1956 ರಿಂದ ಏನು ಕರ್ನಾಟಕ ರಚನೆಯಾಯಿತು. ಆಗ ನಾವು ಮಾಡ ಬೇಕಾದಂಥ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡದೆ ಇರುವುದರ ಕಾರಣ ಈ ಹೊತ್ತು 25 ವರ್ಷಗಳ ಕಾಲ ಅಸಿಸ್ಟೆಂಟ್ ಡೈರೆಕ್ಟರಾಗಿ ಕೆಲಸ ಮಾಡಿ ದವನು ಇಂಡಸ್ಟ್ರಿಯಲ್ ಡಿಪಾರ್ಟಮೆಂಟಿನಲ್ಲಿ ಅಸಿಸ್ಟೆಂಟ್ ಡೈರೆಕ್ಟರಾಗಿಯೇ ಇದ್ದಾನೆ. ರಾಜ್ಯದ ಆಡಳಿತದಲ್ಲಿ ಸುಸೂತ್ರವಾಗಿ ಕೆಲಸ ಮಾಡತಕ್ಕ ಕೆಲಸಗಾರನ ಯೋಗ್ಯತೆ, ಆತನ ಮೇಧಾಶಕ್ತಿ, ಆತನಲ್ಲಿರುವ ಚಾಕಚಕ್ಯತೆಯನ್ನು ಪುರಸ್ಕಾರ ಮಾಡುವುದಕ್ಕೆ ತಿಳಿಯದೆಹೋದರೆ ಕೆಲಸ ಹೇಗೆ ಆಗುತ್ತದೆ? ಆಫೀಸುಗಳಲ್ಲಿ ಹೋಗಿ ನೋಡಿದರೆ ಯಾರಿಗೆ ಪ್ರಮೋಷನ್ ಸಿಕ್ಕಿಲ್ಲ, ಯಾರು ಹತ್ತಾರು ವರ್ಷಗಳ ಕಾಲ ಬರೀ ಲಾಬಿ ಮಾಡಿಕೊಂಡು ನನಗ ಪ್ರಮೋಷನ್ ಸಿಕ್ಕಿಲ್ಲ, ಕೋರ್ಟಿಗೆ ಹೋಗಬೇಕು, ಇಲ್ಲ ಎಂ. ಎಲ್. ಎ. ಗಳನ್ನು ಹಿಡಿಯಬೇಕು, ಮಂತ್ರಿಗಳನ್ನು ಹಿಡಿಯಬೇಕು ಎಂದು ಇರುತ್ತಾರೆ ಅವರು ಎಷ್ಟರಮಟ್ಟಿಗೆ ಕೆಲಸ ಮಾಡಿಯಾರು? ಆಫೀಸಿನಲ್ಲಿ ತನ್ನ ಜೀವನದ ಉದ್ದೇಶವನ್ನು ಸಾಧನೆ ಮಾಡಿಕೊಳ್ಳುವುದು ಒಂದೇ ಆತನ ಗುರಿ ಯಾಗಿರುವಾಗ ಬೇರೆ ವಿಷಯ ಆತನ ಗಮನಕ್ಕೆ ಬರುತ್ತದೆಯೇ ಎಂದು ಯೋಚನೆಮಾಡಬೇಕಾಗಿದೆ. ಇದು ದೊಡ್ಡ ಅವ್ಯವಸ್ಥೆಯಾಗುವುದಕ್ಕೆ ಐದು ರಾಜ್ಯಗಳಿಂದ ಸೇರಿಕೊಂಡಿರತಕ್ಕ ಕರ್ನಾಟಕದ ವಿಧ ವಿಧವಾದ ಕಾನೂನು ಏನಿವೆ ಅವನ್ನೆಲ್ಲ ಸಮನ್ವಯ ಮಾಡಿ ಕರ್ನಾಟಕದ ಇಡೀ ಅನ್ವಯಿಸತಕ್ಕ ಕಾನೂನು 17 ವರ್ಷವಾದರೂ ಮಾಡಲಿಲ್ಲವೆಂದರೆ ಇದು ನಿಜವಾಗಿಯೂ ನಾವು ತಲೆ ತಗ್ಗಿಸ ಬೇಕಾದ ವಿಚಾರ. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಕ್ಯಾಬಿನೆಟ್ ಮುಂದೆ ಇದೆ, ಇನ್ನೂ ಅಪ್ರೂವ್ ಆಗಿಲ್ಲ ಎನ್ನುವುದನ್ನು ಕೆಲವು ಇಲಾಖೆಗಳಲ್ಲಿ ಕೇಳಿದ್ದೇನೆ. ಇದಕ್ಕೆ ಇರತಕ್ಕ ಸಾಧಕಬಾಧಕಗಳೇನು, ಇದಕ್ಕೆ ಏಕೆ ಒಂದು ಡೆಡ್‌ಲೈನ್ ಫಿಕ್ಸ್ ಮಾಡಬಾರದು? ಅಧಿಕಾರಿಗಳು ತಮ್ಮ ಹೆಂಡಿರು ಮಕ್ಕಳನ್ನು ಸಲಹಬೇಕು. ಆದರೆ ತನ್ನ ಪ್ರಮೋಷನ್, ತನ್ನ ಬಡ್ತಿ ಇದರ ಬಗ್ಗೆ 24ಗಂಟೆಯೂ ತಲೆ ಕೆಡಿಸಿಕೊಳ್ಳುವುದಾದರೆ ನಾವು ರಾಜ್ಯದಲ್ಲಿ ಏನು ತಾನೆ ಮಾಡುವುದಕ್ಕಾದೀತು ಎಂದು ಯೋಚನೆ ಮಾಡಬೇಕಾಗುತ್ತದೆ. ಕ್ಲಾಜ್ ನಾಲ್ಕರಲ್ಲಿ ಹೇಳಿರುವ ವಿಚಾರದ ಬಗ್ಗೆ ನಾನು ಕಾನೂನು ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಈ ಹೊತ್ತು ಏನೇ ಆಗಲೀ, ಕತ್ತೆಯಾದರೂ ಚಿಂತೆ ಇಲ್ಲ, ಕುದುರೆಯಾದರೂ ಚಿಂತೆ ಇಲ್ಲ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಎಂದು ಯಾರಾದರೂ ಹೇಳಿದರೆ, ಅವರಿಗೆ ವ್ಯತ್ಯಾಸವೇನೂ ಕಾಣುವ ಹಾಗೆಯೇ ಇಲ್ಲ. ಎರಡನ್ನೂ ಒಂದೇ ತರಹ ನೋಡತಕ್ಕ ಸಮಾಜವಾದ ನಮಗೆ ಬೇಕಿಲ್ಲ. ಕುದುರೆಯನ್ನು ಕುದುರೆ, ಕತ್ತೆಯನ್ನು ಕತ್ತೆ ಎಂದು ಕರೆಯಬೇಕಾಗುತ್ತದೆ. ಒಂದು ಗುರುತರವಾದ ಜವಾಬ್ದಾರಿಯನ್ನು ವಹಿಸಬೇಕಾದರೆ ಆತನ ಯೋಗ್ಯತೆಗೆ ಪ್ರಾಮುಖ್ಯತೆ ಕೊಡಬೇಕಾಗುತ್ತದೆ. ಆದೇ ದೃಷ್ಟಿಯಿಂದ ಈ ಹೊತ್ತಿನ ದಿವಸ ಸುಪ್ರೀಂ ಕೋರ್ಟಿನ ಚೀಫ್ ಜಸ್ಟೀಸ್ ಅವರ ನೇಮಕವಾಯಿತು. ಅದನ್ನು ಅಭಿನಂದಿಸಬೇಕು. ಆದರೆ ಇದರಲ್ಲಿ ನಾನು ಮೊದಲೇ ಹೇಳಿದಂತೆ ಫೇವರಿಟಿಸಂ ಎನ್ನುವುದು ಇರಕೂಡದು. ಯೋಗ್ಯತೆ ಒಂದೇ ಪ್ರಧಾನವಾಗಿರಬೇಕು. ಆದರೆ ಅದನ್ನು ಅಳೆಯುವ ಬಗೆ ಹೇಗೆ? ನನ್ನ ಬಂಧು ಕೂಡಾ ಬಹಳ ಯೋಗ್ಯ, ಮೇಧಾಶಕ್ತಿ ಇರುವವನು, ಜಾಣ್ಮೆಯ ಅಪರಾವತಾರ ಎಂದು ಹೇಳುವ ಅಭಿಮಾನ ನನಗೆ ಬರುವುದು ಸಹಜ. ನನ್ನ ಬಂಧುವಾಗಲೀ, ನನ್ನ ವೈರಿಯಾಗಲೀ, ನನ್ನನ್ನು ನೋಡಲಿ, ನೋಡದೆ ಇರಲಿ, ನಮಸ್ಕಾರ ಹಾಕಲಿ, ಹಾಕದೇ ಇರಲಿ, ಕರೆದು ಕೊಡತಕ್ಕ, ಪುರಸ್ಕಾರ ಮಾಡತಕ್ಕ ಪದ್ಧತಿಯನ್ನು ನಾವು ಈ ಪ್ರಮೋಶನ್‌ನಲ್ಲಿ ತೆಗೆದುಕೊಂಡು ಬಾರದೆ ಹೋದರೆ ಯಾವತ್ತೂ ಕೂಡ ನಮ್ಮ ಕಾರ್ಯಾಂಗ ಸುಸೂತ್ರವಾಗಿ ನಡೆಯುವುದಕ್ಕಾಗುವುದಿಲ್ಲ ಎನ್ನುವವರಲ್ಲಿ ನಾನೂ ಒಬ್ಬ.

2·30 P.M.

ನಾನು ವಿದ್ಯಾರ್ಥಿಯಾಗಿದ್ದಾಗ ಮಹಾರಾಜಾ ಕಾಲೇಜಿನಲ್ಲಿ ಪಾರ್ಥಸಾರಥಿ ಎಂಬುವರು ಆಸಿಸ್ಟೆಂಟ್ ಮಾಸ್ಟರ ಅಂದರೆ ಲೆಕ್ಚರರ್ ಆಗಿದ್ದರು. ನಾನು ಆ ಕಾಲೇಜಿಗೆ ಹೋಗುವುದಕ್ಕೂ ಮೊದಲು ಸಹ ಅವರು ಅದೇ ಕೆಲಸ ಮಾಡುತ್ತಿದ್ದರು. ಅವರ ವಿದ್ಯಾರ್ಥಿಯೊಬ್ಬರು ಮುಂದೆ ಅದೇ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಆದರು. ಮುಂದೆ ವೈಸ್-ಛಾನ್ಸಲರ ಆದರು. ಆದರೆ ಇವರು ಮಾತ್ರ ಅದೇ ಹುದ್ದೆಯಲ್ಲಿ ಇದ್ದರು. ತಮ್ಮ ಶಿಷ್ಯನನ್ನು ಮಾತ್ರ ನರಸಿಂಹ ಎಂದೇ ಕರೆಯುತ್ತಿದ್ದರು. ತಮಗೆ ಪ್ರಮೋಷನ್ ಸಿಗಲಿಲ್ಲ, ಅನ್ಯಾಯವಾಯಿತು ಎಂಬ ವಿಚಾರವನ್ನೇ ಅವರು ತರಗತಿಯಲ್ಲಿ ಹೇಳುತ್ತಿದ್ದರು. ಇಂತಹ ಅರಳು ಮರಳನ್ನು ಕ್ರಿಯೇಟ್ ಮಾಡಿದರೆ ರಾಜ್ಯದಲ್ಲಿ ಕೆಲಸ ಸುಸೂತ್ರವಾಗಿ ನಡೆಯುವುದಾದರೂ ಹೇಗೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಈ ಬಿಲ್ಲನ್ನು ತಂದಿರುವ ಉದ್ದೇಶ ಸಫಲವಾದರೆ ಈ ರಾಜ್ಯಕ್ಕೆ ನಿಜಕ್ಕೂ ಒಳ್ಳೆಯ ಸುಯೋಗ ಬರುತ್ತದೆಂದು ಹೇಳುವವರ ಪೈಕಿ ನಾನೂ ಸಹ ಒಬ್ಬ. ಮುಖ್ಯವಾಗಿ ಸರ್ಕಾರಿ ನೌಕರರ ಕಾರ್ಯದಕ್ಷತೆಯ ಬಗ್ಗೆ ಗುಪ್ತ ವರದಿಯನ್ನು ಸರ್ಕಾರದವರು ಇಡಬೇಕಾಗುತ್ತದೆ. ಈ ಕೆಲಸವನ್ನು ನೌಕರರ ಮೇಲಿನ ಅಧಿಕಾರಿಗಳಿಗೆ ವಹಿಸುವುದು ಸರಿಯಲ್ಲ. ಏಕೆಂದರೆ ಅಧಿಕಾರಿಗೂ ಕೆಳಗಿನ ನೌಕರರಿಗೂ ಏನಾದರೂ ಆಗದಿದ್ದರೆ ಅಂತಹ ನೌಕರರ ಗುಪ್ತ ವರದಿಯನ್ನು ತಯಾರಿಸುವಾಗ ಹತ್ತಿಕ್ಕುವ

(ಶ್ರೀ ಎಸ್. ಎಂ. ಶೀರಸಾಳಿ ಚಂದ್ರಶೇಖರ್)

ಪ್ರವೃತ್ತಿ ಇರುತ್ತದೆ. ಈ ಕಾರಣದಿಂದ ರಾಜ್ಯದ ಸೂತ್ರವನ್ನು ಹಿಡಿದುಕೊಂಡಿರುವವರು ಬೇರೆ ಒಂದು ಮಿಷಿನರಿ ಇಟ್ಟುಕೊಂಡು, ಅಂದರೆ ಸಿ. ಐ. ಡಿ.ಗಳನ್ನು ಎಲ್ಲ ಕಡೆ ಹಾಕಿ ಪ್ರತಿಯೊಬ್ಬ ನೌಕರನೂ ಯಾವ ರೀತಿ ಕೆಲಸ ಮಾಡುತ್ತಾನೆ. ಆಫೀಸ್ ವೇಳೆಯಲ್ಲಿ ಯಾರು ತಮ್ಮ ಕೆಲಸ ಸರಿಯಾಗಿ ಮಾಡದೇ ಹೋಟೇಲಿನಲ್ಲಿ ಕುಳಿತಿರುತ್ತಾರೆ ಎಂಬುದನ್ನು ಪರೀಕ್ಷೆ ಮಾಡಬೇಕು. ಈ ರೀತಿ ಪರೀಕ್ಷೆ ಮಾಡುವ ಬಗ್ಗೆ ಒಂದು ಅಂಗವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆ ರೀತಿ ಪರೀಕ್ಷೆ ಮಾಡುವ ಮೂಲಕ, ಯಾರು ತನ್ನ ದೇಶ, ತನ್ನ ಸರ್ಕಾರ ಎಂಬ ಅಭಿಮಾನದಿಂದ ದುಡಿಯುತ್ತಾರೋ ಅಂತಹ ಆಫೀಸರಗಳಿಗೆ ಮತ್ತು ನೌಕರರಿಗೆ ಪುರಸ್ಕಾರ ಕೊಟ್ಟರೆ ನಮ್ಮ ಆಡಳಿತ ಯಂತ್ರ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತದೆಂದು ಹೇಳುವವರಲ್ಲಿ ನಾನೂ ಒಬ್ಬ. ಈ ರೀತಿ ಮಾಡದೇ ಕೇವಲ ಸಮಾಜವಾದದ ಬಗ್ಗೆ, ಸರ್ವೋದಯದ ತತ್ವದ ಬಗ್ಗೆ, ಜಗತ್ತಿನ ಕಲ್ಯಾಣದ ಬಗ್ಗೆ ಮಾತನಾಡುವುದರಲ್ಲಿ ಅರ್ಥವಿಲ್ಲ. ಮೊದಲು ಕಾರ್ಯಾಂಗ ಸರಿಯಾಗಿ ಕೆಲಸ ಮಾಡಬೇಕು. ಕಾರ್ಯಾಂಗ ಸರಿಯಾಗಿ ಕೆಲಸ ಮಾಡದಿದ್ದರೆ ಮೇಲೆ ಕುಳಿತಿರುವ ಪಾಲಿಸಿ ಮೇಕರ್ಸ್ ಯಶಸ್ವಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಕೇವಲ ಒಬ್ಬ ಮಂತ್ರಿಯಾಗಲೀ, ಒಬ್ಬ ಮುಖ್ಯಮಂತ್ರಿಯಾಗಲೀ ಎಲ್ಲ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಮಂತ್ರಿಗಳು ಏನಾದರು ಆರ್ಡರ್ ಪಾಸ್‌ಮಾಡಿದರೆ ಅದನ್ನು ಅವರ ಆಪ್ತಕಾರ್ಯದರ್ಶಿ ಮುಂದಕ್ಕೆ ಕಳಿಸದಿದ್ದರೆ ಆ ಆರ್ಡರ್‌ಗೆ ಯಾವ ಬೆಲೆಯೂ ಬರುವುದಿಲ್ಲ. ಈ ಕಾರಣದಿಂದ ಕಾರ್ಯಾಂಗವನ್ನು ಸರಿಯಾಗಿ ವ್ಯವಸ್ಥಿತವಾಗಿ ಇಟ್ಟುಕೊಳ್ಳಬೇಕಾಗಿದೆ. ಇಲ್ಲದಿದ್ದರೆ ರಥ ಮುಂದಕ್ಕೆ ಹೋಗುವುದಿಲ್ಲವೆನ್ನುವ ಅಭಿಪ್ರಾಯ ನನ್ನದಿದೆ. ಈ ಒಂದು ಬಿಲ್ಲಿನ ಉದ್ದೇಶ ಸಫಲವಾಗಲೀ ಎಂದು ಹೇಳಿ ಮತ್ತೊಮ್ಮೆ ಇದನ್ನು ಸ್ವಾಗತಿಸಿ ಮಾನ್ಯ ಕಾನೂನು ಮಂತ್ರಿಗಳನ್ನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಎಸ್. ಪಾಟೀಲ್ : (ಹುಮ್ನಾಬಾದ್) ಮಾನ್ಯ ಅಧ್ಯಕ್ಷಿಣಿಯವರೇ ನಮ್ಮ ಎದುರಿಗೆ ಏನು ಬಿಲ್ಲನ್ನು ಮಾನ್ಯ ಮಂತ್ರಿಗಳು ತಂದಿದ್ದಾರೆ, ಅದರ ಬಗ್ಗೆ ಈಗಾಗಲೇ ಸಾಕಷ್ಟು ಮಂದಿ ಸದಸ್ಯರು ಮಾತನಾಡಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ಈ ಬಿಲ್ಲನ್ನು ತರತಕ್ಕಂಥ ಅವಶ್ಯಕತೆ ಏನಿತ್ತು ಎಂಬ ಅನುಮಾನವನ್ನು ಆ ಕಡೆಯ ಸದಸ್ಯರು ಮತ್ತು ಈ ಕಡೆಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಈ ಒಂದು ವಿಧೇಯಕವನ್ನು ಪಾಸ ಮಾಡದಿದ್ದರೆ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಖರ್ಚು ಬರುತ್ತದೆ. ಅಷ್ಟೊಂದು ಹಣ ಕೊಡಲು ಸರ್ಕಾರದ ಕೈಯಲ್ಲಿ ಇಲ್ಲ, ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಸರ್ಕಾರದ ಹತ್ತಿರ ಹಣ ಇಲ್ಲದಿದ್ದರೆ ಬೇರೆ ಉಪಾಯ ಕಂಡುಹಿಡಿಯಬೇಕಾಗಿತ್ತೇ ಹೊರತು, ಈಗ

(ಶ್ರೀ ಎ. ಎಸ್. ಪಾಟೀಲ್)

ತಂದಿರತಕ್ಕಂಥ ವಿಧೇಯಕ ಅದಕ್ಕೆ ರೆಮಿಡಿಯಲ್ಲ, ಡಯಗ್ನಿಸನ್ ಅಲ್ಲ, ಟ್ರೀಟ್‌ಮೆಂಟ್ ಅಲ್ಲ ಎಂದು ಹೇಳುತ್ತೇನೆ. ಇದರ ಬಗ್ಗೆ ಮಾತನಾಡುತ್ತಾ ಮೆಂಡ್ ಅಥವಾ ಎಂಡ್ ಎಂದು ಹೇಳಿದರು. ಇದು ಎಂಡ್ ಅಲ್ಲ, ಬ್ಲಾಕ್ ಆಗುತ್ತಿದೆ. ಸಪೋಕೇಷನ್ ಅಗುತ್ತಿದೆ. ಈ ರೀತಿ ಆಗಬಾರದಾಗಿತ್ತು. ಏಕೆಂದರೆ ನಾವು ಒಳ್ಳೆಯ ಹಾದಿ ಹುಡುಕುತ್ತಿರುವಾಗ, ಒಬ್ಬ ರೈತ ಹೊಲ ಊಳುವಾಗ ಮಧ್ಯದಲ್ಲಿ ಒಂದು ಕಲ್ಲನ್ನು ಹಾಕಿದಂತೆ ಆಗುತ್ತದೆ. ಇಂದು ಸರ್ಕಾರ ಜ್ಯುಡಿಷಿಯರಿ ಬಗ್ಗೆ ಸ್ಕ್ಯಾಂಡಿ ರಿಗಾರ್ಡ ತೋರಿಸುತ್ತಿದೆ ಎಂದು ರೈಟ್ ರೀಆಕ್ಷನರೀಸ್ ಹೇಳುತ್ತಿದ್ದಾರೆ. ತೋಳ ಬಂತು ತೋಳ ಬಂತು ಎಂದು ಹೇಳುತ್ತಿದ್ದಾರೆ. ಆದರೆ ತೋಳ ಬರಲಿಲ್ಲ. ಕೇವಲ ತೋಳದ ಬಟ್ಟೆಯನ್ನು ಹುಲಿಯ ಬಟ್ಟೆಯನ್ನು ಜನರಿಗೆ ತೋರಿಸುತ್ತಿದ್ದಾರೆ. ಚೀಫ್ ಜಸ್ಟಿಸನ್ನು ನೇಮಕ ಮಾಡಿದ ಪದ್ಧತಿ ಸರಿಯಲ್ಲವೆಂದು ಕೆಲವರು ಹೇಳಿದರು. ಆದರೆ ಅದರಿಂದ ಏನೂ ಆಗಲಿಲ್ಲ. ಇಂತಹ ಸಮಯದಲ್ಲಿ ಮುಖ್ಯವಾಗಿ ನಾನು ಈ ವಿಧೇಯಕದ ಬಗ್ಗೆ ಹೇಳುವುದೇನೆಂದರೆ ಹೈಕೋರ್ಟಿನವರು ಏನು ತೀರ್ಮಾನ ಕೊಟ್ಟಿದ್ದಾರೋ ಅದಕ್ಕೆ ಬೆಲೆ ಇಲ್ಲದಂತೆ ಮಾಡುತ್ತಿದ್ದೀರಿ. ಹೈಕೋರ್ಟಿನ ತೀರ್ಮಾನದ ವಿರುದ್ಧ ಸುಪ್ರೀಂ ಕೋರ್ಟಿಗೆ ಹೋಗಿದ್ದೀರಿ; ಆದರ ತೀರ್ಮಾನ ಏನು ಬರುತ್ತದೆಂಬುದು ಇನ್ನೂ ನಮಗೆ ಗೊತ್ತಿಲ್ಲ, ಆ ಒಂದು ತೀರ್ಪು ಬರುವ ವರೆಗೆ ಎಷ್ಟು ಜನರಿಗೆ ಪರಿಹಾರ ಕೊಡಬೇಕಾಗಿತ್ತೋ, ಎಷ್ಟು ಜನರಿಗೆ ಪ್ರಮೋಷನ್ ಕೊಡಬೇಕಾಗಿತ್ತೋ, ಅದು ಇಲ್ಲದಂತೆ ಮಾಡ ವುದಕ್ಕೆ ಹೊರಟಿದ್ದೀರಿ ಹಿಂದಿನ ತಾರೀಖಿನಿಂದ ತಮಗೆ ಅರಿಯರ್ಸ್ ಬರಬೇಕೆಂದು ಯೊರು ಯೊರು ಕೋರ್ಟಿನಿಂದ ತೀರ್ಮಾನ ತೆಗೆದುಕೊಂಡು ಬಂದಿದ್ದಾರೋ, ಆ ಒಂದು ಸ್ಥಳದಲ್ಲಿ ಅವರಿಗೆ ಕೇಳಲು ಅವಕಾಶವಿರದಂತೆ ಮಾಡಲು ಈ ವಿಧೇಯಕ ವನ್ನು ತಂದಿದ್ದೀರಿ. ನಿರಾಪಧಿ ಜನರಿಗೆ, ನಾನ್ ಪೊಲೀಟಿಕಲ್ ಜನರಿಗೆ ಇದ ರಿಂದ ಬಾಯಿ ತೆರೆಯದಂತೆ ಆಗಿದೆ ಇಂತಹ ಒಂದು ಕಾನ್‌ಟ್ರವರ್ಸಿಯಲ್ ಬಿಲ್ಲನ್ನು ಮಾನ್ಯ ಮಂತ್ರಿಗಳು ತರಬಾರದಾಗಿತ್ತು. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಒಂದು ಸಲಹೆ ಕೊಡಬೇಕೆಂದಿದ್ದೇನೆ. ನಾನು ಅವರಿಗಿಂತ ಸಣ್ಣ ವಯಸ್ಸಿನವನಾದ್ದರಿಂದ, ನಾನು ಕೊಟ್ಟ ಸಲಹೆಯನ್ನು ಮಾನ್ಯ ಮಂತ್ರಿಗಳು ಸಜೆಷನ್ ಎಂದು ತಿಳಿದುಕೊಳ್ಳಲಿ. ಇಂತಹ ವಿಧೇಯಕವನ್ನು ಸಭೆಯ ಮುಂದೆ ತರುವುದಕ್ಕೆ ಮೊದಲು, ಈ ಸಭೆಯ ಎಲ್ಲ ಪಕ್ಷದ ಸದಸ್ಯರನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ನಂತರ ತರುವುದು ಒಳ್ಳೆಯದು. ಹೈದರಾಬಾದ್ ಕರ್ನಾಟಕ ದಿಂದ, ಮದ್ರಾಸ್ ಕರ್ನಾಟಕದಿಂದ, ಮುಂಬೈ ಕರ್ನಾಟಕದಿಂದ ಬಂದಂಥ ಅಧಿಕಾರ ವರ್ಗದವರು ಇದ್ದಾರೆ. ಇವರುಗಳ ಹಣೇಬರಹ ಏನು ಎಂಬುದು ಇನ್ನೂ ತೀರ್ಮಾನವಾಗಿಲ್ಲದಿರುವುದರಿಂದ, ಕಚೇರಿಯ ಕೆಲಸಗಳು ನಡೆಯುವುದು

(ಶ್ರೀ ವಿ. ಎಸ್. ಪಾಟೀಲ್)

ನಿಧಾನವಾಗುತ್ತಿದೆ; ನೋಟ್‌ಗಳನ್ನು ಪ್ರಿಪೇರ್ ಮಾಡುವುದು ನಿಧಾನವಾಗುತ್ತಿದೆ. ವಿಧಾನ ಸೌಧಕ್ಕೆ ಏನಾದರೂ ಟ್ರಂಕಾಲ್ ಬಂದರೆ, ಫೋನ್, ಮೆಸೇಜ್ ಬಂದರೆ ಆಗ ಮಾತ್ರ ಪೇಪರ್‌ಗಳು ಅಲ್ಲಾಡುತ್ತವೆ. ಇಲ್ಲದಿದ್ದರೆ ಪೇಪರ್‌ಗಳು ಮೂವ ಆಗುವುದೇ ಇಲ್ಲ. ನ್ಯಾಯ ಬದ್ಧವಾಗಿ ಎಷ್ಟು ಜನರಿಗೆ ಪ್ರಮೋಷನ್ ಸಿಗಬೇಕಾಗಿತ್ತೋ, ಅದು ಸಿಗದೆ ಗಾಳಿಪಾಲಾಗಿದೆ. ಇದಕ್ಕೆ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಆ ವಿಚಾರದಲ್ಲಿ ತಾವು ವಿವರಗಳನ್ನು ತರಿಸಿಕೊಂಡು ನೋಡಿ ಈ ಸಭೆಗೆ ಹೇಳಿಕೆ ಕೊಡಿ, ಇಲ್ಲವೇ ನನಗೆ ಪ್ರೈವೇಟಾಗಿ ಕಾಗದ ಬರೆದು ತಿಳಿಸಿ. ಒಟ್ಟಿನಲ್ಲಿ ನ್ಯಾಯ ದೊರಕಿಸಿಕೊಡಿ. ಚಿಟಗುಪ್ಪ ಎಂದು ಸ್ಥಳವಿದೆ. ಅಲ್ಲಿ 14 ವರ್ಷದಿಂದ ಕೆಲಸ ಮಾಡುತ್ತಿರುವ ಒಬ್ಬ ಪ್ಯೂನ್ ಇದ್ದಾನೆ. ಆತನು ತನಗೆ ಪ್ರಮೋಷನ್ ಕೊಡಿ ಇಲ್ಲವೇ ಮಿನಿಮಮ್ ಸಂಬಳವನ್ನಾದರೂ ಕೊಡಿ ಎಂದು ಕೇಳುತ್ತಿದ್ದಾನೆ. ಆದರೆ ಅವನ ಬೇಡಿಕೆ ಇಲ್ಲಿಯವರೆಗೆ ಮೇಲಿನ ಅಧಿಕಾರಿಗಳು ಈಡೇರಿಸಿಕೊಟ್ಟಿಲ್ಲ. ಇಂದಿಗೂ ಸಹ ಕೇವಲ 8 ರೂಪಾಯಿಗಳ ಸಂಬಳ ಪಡೆಯುತ್ತಿದ್ದಾನೆ. ಆತನಿಗೆ ಪ್ರಮೋಷನ್ ಕೊಡಬಾರದೆಂದು ಪಿತೂರಿ ನಡೆಯುತ್ತಿದೆಯೋ ಏನೋ ಗೊತ್ತಿಲ್ಲ. ಮೇಲಿನ ಅಧಿಕಾರಿಗಳ ಪಿತ್ರೂರಿಯಿಂದ ಆ ಸಣ್ಣ ವ್ಯಕ್ತಿಗೆ ನ್ಯಾಯ ದೊರೆಯುತ್ತಿಲ್ಲ. ಆತ ಎಲ್ಲಿಯವರೆಗೆ ಈ ಅನ್ಯಾಯವನ್ನು ಸಹಿಸಬೇಕು? ನಾನು ಹೇಳಿದಂಥ ವಿಚಾರ ಕರೆಕ್ಟ್ ಇದ್ದರೆ, ಸಂಬಂಧಪಟ್ಟ ಅಧಿಕಾರಿಯನ್ನು ಸಪ್ಪೆಂಡ್ ಮಾಡಿ, ಆ ಅಧಿಕಾರಿಯನ್ನು ಬಜಾರ್‌ಗೆ ಕರೆದುಕೊಂಡು ಬಂದು ಆತನ ತಲೆಯನ್ನು ಬೋಳಿಸಿ.

ಪ್ರತಿಯೊಂದು ಜಿಲ್ಲೆಯಲ್ಲಿಯೂ ಇಂಥಾ ಕೇಸುಗಳು ಸಾವಿರಾರು ಇವೆ. ಈ ವಿಧಾನಸೌಧದ ಬಿಲ್ಡಿಂಗ್‌ನಲ್ಲಿ ಅಂಥಾ 500 ಸಮಸ್ಯೆಗಳು ಇವೆ. ಎಮೋಷನಲ್ ಇಂಟಿಗ್ರೇಷನ್ ಆಯಿತು. ಹೈದರಾಬಾದ್ ಕರ್ನಾಟಕ ಎಂದರೆ ಪ್ರಮೋಷನ್ ಕೊಡುವುದಕ್ಕೆ ಸ್ವಲ್ಪ ಹಿಂದೆ ಸರಿಯುತ್ತಾರೆ. ಸಾಮಾನ್ಯವಾಗಿ ಯಾವ ಅಧಿಕಾರಿಗಳಿಗೆ ಪ್ರಮೋಷನ್ ಕೊಡಬೇಕು ಎಂದು ಜಿ. ಎ. ಡಿ. ಗೆ. ಫೈಲ್ ಬಂದರೆ ಅದಕ್ಕೆ ಅಧಿಕಾರಿಗಳು ಸೈನ್ ಹಾಕಿ ಕಳುಹಿಸುವುದು ಕಷ್ಟ. ಪ್ರಮೋಷನ್ ಫೈಲುಗಳಿಗೆ ಸೈನು ಹಾಕಬೇಕಾದರೆ ಕುಲ ಗೋತ್ರ, ಟ್ರೇಡು, ನೆಂಟಸ್ಥನ ಎಲ್ಲಾ ನೋಡುತ್ತಾರೆ. ಈ ಒಂದು ಕಾರಣದಿಂದಲೇ ಎಷ್ಟೋ ಪ್ರಮೋಷನ್‌ಗಳು 7-8 ವರ್ಷಗಳಿಂದ ನಿಂತು ಹೋಗಿವೆ. ಯಾವುದಾದರೂ ಟೆಕ್ನಿಕಲ್ ಡಿಫಿಕಲ್ಟ್ ಇದ್ದರೆ, ಕೇಂದ್ರ ಸರ್ಕಾರದ ಡೈರೆಕ್ಷನ್ ಬೇಕಾಗಿದ್ದರೆ ಅಥವಾ ಜುಡಿಷಿಯಲ್ ಇಂಟರ್‌ಪ್ರಿಟೇಷನ್ ಇದ್ದರೆ ಸ್ವಲ್ಪ ಕಾಲ ತೆಗೆದುಕೊಂಡರೂ ಪರವಾಯಿಲ್ಲ. ಇಂಥಾ ಯಾವುದೇ ಕಾರಣಗಳೂ ಇಲ್ಲದಿದ್ದರೂ ಸಹ ಪ್ರಮೋಷನ್ ಕೊಡುವುದಕ್ಕೆ ವರ್ಷಾನುಗಟ್ಟಲೆ ತಳ್ಳುತ್ತಿದ್ದಾರೆ. ಇದು ಸರಿಯಲ್ಲ. ಮೆಡಿಕಲ್ ಡಿಪಾರ್ಟ್‌ಮೆಂಟ್

(ಶ್ರೀ ಪಿ. ಎಸ್. ಪಾಟೀಲ್)

ಮೆಂಟಿನಲ್ಲಿಯೂ ಸಹ ಇದೇ ರೀತಿ ಕೆಲವು ಅನ್ಯಾಯಗಳು ಆಗಿವೆ. ಯಾವುದೇ ಒಂದು ಪ್ರಮೋಷನ್ ಸಿಕ್ಕಬೇಕಾದರೆ ಮಂತ್ರಿಗಳ ಅಳಿಯನೋ ಸಹೋದರನೋ ಆಗಿದ್ದರೆ ಬೇಗ ಪ್ರಮೋಷನ್ ಸಿಕ್ಕುತ್ತದೆ. ಈ ದೃಷ್ಟಿಯಿಂದ ಯಾವುದೇ ಇಲಾಖೆಯನ್ನು ತೆಗೆದುಕೊಂಡರೂ ಕೂಡ ನ್ಯಾಯವಾಗಿ ಯಾರಿಗೆ ಯಾವ ಕಾಲಕ್ಕೆ ಪ್ರಮೋಷನ್ ಸಿಕ್ಕಬೇಕೋ ಅದು ಸಿಕ್ಕುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ನಿಗಾ ವಹಿಸಬೇಕು. ಮತ್ತು ಆ ಬಗ್ಗೆ ಮಾನ್ಯ ಕಾನೂನು ಶಾಖೆಯ ಮಂತ್ರಿಗಳು ಈ ಸಭೆಯನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಈ ಬಗ್ಗೆ ಒಂದು ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಹೈದರಾಬಾದ್ ಕರ್ನಾಟಕಕ್ಕೆ ಹೈಕೋರ್ಟಿನಲ್ಲಿ ಪ್ರಾತಿನಿಧ್ಯ ಇರಲಿಲ್ಲ. ಈಗ ಯಾರೋ ಒಬ್ಬರನ್ನು ಜುಡಿಷಿಯಲ್ ಆಫೀಸರನ್ನಾಗಿ ಪ್ರಮೋಟ್ ಮಾಡಿದ್ದಾರೆ. ಹೈಕೋರ್ಟಿನಲ್ಲಿ ಕೂಡಾ ಯಾವುದೇ ಒಂದು ಪ್ರಮೋಷನ್ ಕೊಡಬೇಕಾಗಿದ್ದರೂ ಕೂಡ ಕ್ಯಾಸ್ಟ್, ಟ್ರೇಡ್ ಎಲ್ಲವನ್ನು ನೋಡುತ್ತಾರೆ. ಇಂಥಾ ಒಂದು ಪರಿಸ್ಥಿತಿ ಇರುವಾಗ ಈ ಒಂದು ನಿರಾಶಾದಾಯಕವಾದ ಬಿಲ್ಲನ್ನು ಈ ಸಭೆಯ ಮುಂದೆ ತಂದಿದ್ದಾರೆ. ಇದು ಸಮರ್ಪಕವಾಗಿಲ್ಲ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ ಅಲ್ಲಿ ಇದನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಅವರು ಈ ಸಭೆಗೆ ವರದಿ ಮಾಡಿದ ಮೇಲೆ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದು. ಈ ಬಿಲ್ಲಿನ ಮೆರಿಟ್ ಮತ್ತು ಡೀಮೆರಿಟ್ ಬಗ್ಗೆ ಶ್ರೀಮಾನ್ ಎಂ. ಎಸ್. ಕೃಷ್ಣನ್ ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಇದನ್ನು ಈಗ ತಂದಿರುವ ರೀತಿಯಲ್ಲಿಯೇ ಪಾಸು ಮಾಡುವುದಾದರೆ ಸಾರ್ವಜನಿಕರಿಂದ ಹೆಚ್ಚು ಟೀಕೆಗೆ ಗುರಿಯಾಗಬೇಕಾಗುತ್ತದೆ ಎಂದು ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತೇನೆ. ಇದಕ್ಕೆ ಒಂದು ಪ್ರೆಸ್ಟೀಜ್ ಇಷ್ಯೂ ತರಬೇಡಿ. ಇದರಿಂದ ಅನೇಕ ನೌಕರರಿಗೆ ತೊಂದರೆಯಾಗುತ್ತದೆ. ಎಂದು ನಾನು ಹೇಳುತ್ತೇನೆ.

ಮೈಸೂರು ಅಪೆಲೇಟ್ ಟ್ರಿಬ್ಯುನಲ್‌ನಲ್ಲಿ ಒಬ್ಬ ವ್ಯಕ್ತಿಗೆ ಪ್ರಮೋಷನ್ ಆಯಿತು. ಆ ಬಗ್ಗೆ ಸಂಬಂಧಪಟ್ಟ ಫೈಲು ಸೆಕ್ರೆಟೇರಿಯಟ್‌ಗೆ ಲಾ ಡಿಪಾರ್ಟ್‌ಮೆಂಟಿಗೆ ಬಂದು $4\frac{1}{2}$ ವರ್ಷವಾಯಿತು. ಇನ್ನೂ ಅದು ತೀರ್ಮಾನವಾಗಿಲ್ಲ. ಇವೊತ್ತು ಯಾವುದೇ ಒಬ್ಬ ನೌಕರನಾಗಲೀ ಕಷ್ಟಪಟ್ಟು ಬೆವರು ಸುರಿಸಿ ಕೆಲಸ ಮಾಡಬೇಕಾಗುತ್ತದೆ. ಹೀಗಿರುವಾಗ ಅವರಿಗೆ ಆಗತಕ್ಕಂಥಾ ಅನ್ಯಾಯವನ್ನು ಹೋಗಲಾಡಿಸಬೇಕು. ಯಾರು ಅವರ ಪ್ರಮೋಷನ್ ಬಗ್ಗೆ ಅಡ್ಡಿ ಬರುತ್ತಾರೆ ಅಂಥಾ ಹೆಗ್ಗಣಗಳನ್ನು ಬಲಿ ಹಾಕಬೇಕು. ಅಂಥವರಿಗೆ ಬೆಂಬಲ ಕೊಡಬಾರದು. ಇವೊತ್ತು ಸಿವಿಲ್ ಸರ್ವೆಂಟ್‌ಗಳಲ್ಲಿ ಡಿಸ್‌ಕಂಟೆಂಟ್‌ಮೆಂಟ್ ಇದ್ದುದರಿಂದ ಉತ್ತರ ಪ್ರದೇಶದಲ್ಲಿ ಸಶಸ್ತ್ರ ಪೋಲೀಸಿನವರಿಗೂ ಮತ್ತು

(ಶ್ರೀ ವಿ. ಎಸ್. ಪಾಟೀಲ್)

ಸೈನಿಕರಿಗೂ ನಡೆದಂತಹ ಗಲಭೆಯಲ್ಲಿ ಸುಮಾರು 28 ಪ್ರಾಣಗಳು ಹೋಗಿವೆ ಎಂದು ಪತ್ರಿಕೆಯಲ್ಲಿ ಬಂದಿದೆ. ಆದ್ದರಿಂದ ಸರ್ಕಾರದ ಮೆಷನರಿ ಏನಿದೆ ಅದು ಸುಲಲಿತವಾಗಿ ನಡೆಯಬೇಕಾಗಿದ್ದರೆ ಪ್ರಗತಿಪರವಾದ ಕಾನೂನು ಕಾಯಿದೆಯನ್ನು ತರಬೇಕಾಗುತ್ತದೆ. ಯಾವುದೇ ಒಂದು ಪ್ರಮೋಷನ್ನಿಗೆ ಸಂಬಂಧಪಟ್ಟ ಫೈಲು ಬೇಗ ಮೂವ್ ಆಗುವುದಿಲ್ಲ. ಇಂಥಾದ್ದರ ಕಡೆಗೆ ಮಾನ್ಯ ಮಂತ್ರಿಗಳು ಗಮನಿಸಿ ನ್ಯಾಯವಾಗಿ ಯಾರಿಗೆ ಪ್ರಮೋಷನ್ ಸಿಕ್ಕಬೇಕೋ ಅವರಿಗೆ ಪ್ರಮೋಷನ್ ಕೊಟ್ಟು ಅವರಿಗೆ ಸೋಷಿಯಲ್ ಜಸ್ಟೀಸ್ ಸಿಕ್ಕುವಂತೆ ಮಾಡಬೇಕು. ಬೀದರ್‌ನಲ್ಲಿ ಒಬ್ಬರು ಉಪಾಧ್ಯಾಯರಿಗೆ ನ್ಯಾಯವಾಗಿ ಪ್ರಮೋಷನ್ ಸಿಕ್ಕಬೇಕಾಗಿರುವುದು ಸಿಕ್ಕಿಲ್ಲ. ಮಾನ್ಯ ಕಾನೂನು ಶಾಖೆಯ ಮಂತ್ರಿಗಳು ಸ್ವಲ್ಪ ಧೈರ್ಯ ಮಾಡಿ ತಮ್ಮ ಸುತ್ತುಮುತ್ತು ಇರತಕ್ಕವರ ಬಲೆಗೆ ಬೀಳದೆ, ಅವರ ಮಾತುಗಳಿಗೆ ಕಿವಿಗೊಡದೆ ಬೇಗ ಪ್ರಮೋಷನ್ ಫೈಲಿಗೆ ಸೈನು ಮಾಡುವಂತೆ ಮಾಡಬೇಕು. ಕಾಯಿದೆ ಪ್ರಕಾರ ರೂಲ್ಸ್ ಯಾರಿಗೆ ಪ್ರಮೋಷನ್ ಸಿಕ್ಕಬೇಕೋ ಅದು ಸಿಕ್ಕುವಂತೆ ವ್ಯವಸ್ಥೆ ಮಾಡಿ. ಆ ಬಗ್ಗೆ ಯಾವ ಎಂ. ಎಲ್. ಎ. ಹೇಳಿದರೂ ತಾವು ತಲೆಬಾಗಬೇಡಿ. ಯಾವುದೇ ಒಂದು ಒಳ್ಳೆಯ ಕೆಲಸವನ್ನು ಮಾಡಿ ಜನಗಳ ವಿಶ್ವಾಸವನ್ನು ಪಡೆದುಕೊಳ್ಳಿ. ಈಗ ಈ ಬಿಲ್ಲನ್ನು ಯಾವ ಫಾರಂನಲ್ಲಿ ತಂದಿದ್ದೀರೋ ಅದು ಸರಿಯಾಗಿಲ್ಲ. ಇದನ್ನು ಸ್ವಾಗತ ಮಾಡುವವರು ಒಬ್ಬರೂ ಸಿಕ್ಕುವುದಿಲ್ಲ. ಈ ಬಿಲ್ಲನ್ನು ಮತ್ತೊಂದು ಫಾರಂನಲ್ಲಿ ತರಬೇಕಾಗುತ್ತದೆ. ಈ ಮಸೂದೆಯನ್ನು ವಿರೋಧಪಕ್ಷದಲ್ಲಿ ಸಹ ಯಾರೂ ಸ್ವಾಗತ ಮಾಡುವುದಿಲ್ಲ. ಅದ್ದರಿಂದ ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ತಾವು ಪ್ರಿಸ್ಟೇಜ್ ಇಷ್ಯೂ ಎಂದು ತಿಳಿದುಕೊಳ್ಳಬಾರದು. ಆದ್ದರಿಂದ ಇದನ್ನು ವಾಪಸ್ಸು ತೆಗೆದುಕೊಳ್ಳುವುದು ಸೂಕ್ತವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ) :—ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಸ್ವಾಗತ ಮಾಡುತ್ತಾ, ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಇದರಲ್ಲಿ ಯಾರು ಕೆಲಸ ಮಾಡಲಿಲ್ಲವೋ, ಅವರಿಗೆ ಸಂಬಳ ಕೊಡಕೂಡದು ಎಂದು ಇದೆ. ಇದು ನ್ಯಾಚುರಲ್ ಜಸ್ಟಿಸ್ ಮತ್ತು ಇಕ್ವಿಟಿ (natural Justice and equity) ಗನುಗುಣವಾಗಿದೆ. 1956ನೇ ಇಸವಿಯಲ್ಲಿ ಸ್ಟೇಟ್ ರೀಆರ್ಗನೈಸೇಶನ್ ಆಯಿತು. ಆ ಕಾಲದಲ್ಲಿ ಬಾಂಬೆ ಕರ್ನಾಟಕದಿಂದ, ಮದ್ರಾಸ್ ಕರ್ನಾಟಕದಿಂದ ಮತ್ತು ಹೈದರಾಬಾದ್ ಕರ್ನಾಟಕದಿಂದ, ಕೆಲವು ಪ್ರದೇಶಗಳು ಬಂದು ಮೈಸೂರು ರಾಜ್ಯದೊಂದಿಗೆ ಸೇರಿಕೊಂಡಿತು. ಆಗ 43 ಇಲಾಖೆಗಳು ಇದ್ದವು. ಆದರೆ ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯ

(ಶ್ರೀ ಕೆ. ಎಂ. ರುದ್ರಪ್ಪ)

ಸಂಬಳ ಸಾರಿಗೆಗಳು ಇದ್ದವು. ಅವುಗಳೆಲ್ಲವನ್ನು ಈಕ್ವೇಟ್ ಮಾಡಬೇಕಾಗಿತ್ತು. ಒಂದು ಪ್ರೊವಿಜನಲ್ ಲಿಸ್ಟ್ ಆದ ಮೇಲೆ ಫೈನಲ್ ಲಿಸ್ಟ್ ಮಾಡುವುದು ನಮ್ಮ ಸರ್ಕಾರದ ಕೈಯಲ್ಲಿ ಇಲ್ಲ. ಅದು ಕೇಂದ್ರ ಸರ್ಕಾರದ ಕೈಯಲ್ಲಿ ಇದೆ. ಅದಕ್ಕೆ ಯು. ಪಿ. ಎಸ್. ಸಿ. ಯ ಅಧ್ಯಕ್ಷರು ಇರತಕ್ಕಂತಹ ಒಂದು ಸಮಿತಿ ಇದೆ. ಅವರಲ್ಲಿ ಯೂನಿಯನ್ ಲಾ ಸೆಕ್ರೆಟರಿಯವರು ಸಹ ಇದ್ದಾರೆ. ಆದ್ದರಿಂದ ಇದರಲ್ಲಿ ಏನಾದರೂ ಲೋಪದೋಷಗಳು ಇದ್ದರೆ, ಅದು ಆಗ ಆಗಿರಬಹುದು. ಆದರೆ ಅದು ನಮ್ಮ ರಾಜ್ಯ ಸರ್ಕಾರದ ಕೈಯಲ್ಲಿ ಇರಲಿಲ್ಲ. ಕೋರ್ಟಿನಲ್ಲಿ ಕೆಲವು ಸಂದರ್ಭಗಳಲ್ಲಿ ಕೆಲಸ ಮಾಡದಿದ್ದರೂ ಸಹ ಸಂಬಳ ಕೊಡಿ ಎಂದು ಹೇಳುತ್ತಿದ್ದಾರೆ. ಅದು ಸರಿಯಲ್ಲ. ಈ ಬಿಲ್ಲಿಗೆ ಸಪೋರ್ಟು ಆಗುವ ಹಾಗೆ ಎರಡು ಸುಪ್ರೀಂ ಕೋರ್ಟು ಡಿಸಿಶನ್ಸ್ ಬಂದಿವೆ. ಅದು ಈ ಮಸೂದೆಗೆ ಬೆಂಬಲ ಕೊಡುತ್ತದೆ. ಮಾನ್ಯ ಸದಸ್ಯರಿಂದ ಕೃಷ್ಣನ್‌ರವರು ಅದು ಇದಕ್ಕೆ ಸಂಬಂಧವಿಲ್ಲವೆಂದು ಹೇಳುತ್ತಿದ್ದಾರೆ. ನಾನು ಹೇಳುವುದು, ಆದರೆ ಪ್ರಿನ್ಸಿಪಲ್ ಒಂದೇ ಆಗಿರುವುದು ಅದರಲ್ಲಿ ಇದೆ. ಆದ್ದರಿಂದ ಆ ಡಿಸಿಶನ್ ಈ ಮಸೂದೆಗೆ ಬಹಳ ಸಹಾಯಕವಾಗಿದೆ. ನಮ್ಮ ಸರ್ಕಾರದ ವರಮಾನದಲ್ಲಿ ಶೇಕಡಾ 40 ಭಾಗ ಸರ್ಕಾರೀ ಅಧಿಕಾರಿಗಳ ಸಂಬಳಕ್ಕಾಗಿ ಹೋಗುತ್ತಿದೆ. ನಾವು ಎರಡೂವರೆ ಪರ್‌ಸೆಂಟ್ ಇರತಕ್ಕಂತಹ ಜನಸಂಖ್ಯೆಗೆ ಇಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಆದರೂ ಹೈಕೋರ್ಟಿನಲ್ಲಿ ರಿಟ್ರಾಸ್ಪೆಕ್ಟಿವ್ ಪ್ರೋಮೋಶನ್ ಕೊಡುವುದನ್ನು ನಿಲ್ಲಿಸಿ ಎಂದು ಏನೂ ಬಿಲ್ಲಿನಲ್ಲಿ ಹೇಳಿಲ್ಲ. ಕೇವಲ ಸಂಬಳ ಕೊಡಬೇಡಿ ಎಂದು ಮಾತ್ರ ಹೇಳುತ್ತಿದ್ದಾರೆ. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಾಗತ ಮಾಡಬೇಕಾಗಿತ್ತು. ಅವರು ಹಳ್ಳಿಗಾಡಿನಿಂದ ಬಂದವರು. ಯಾವುದೋ ಕಾರಣಕ್ಕೋಸ್ಕರ ಇದನ್ನು ವಿರೋಧ ಮಾಡುತ್ತಿರುವುದು ವಿಷಾದನೀಯ. ಅವರು ಇದರಿಂದ ಸುಪ್ರಿಮೆಸಿ ಅಫ್‌ಲಾ ಮತ್ತು ರೂಲ್‌ಅಫ್ ಲಾ ಕ್ಕೆ ಧಕ್ಕೆ ಬಂದಿದೆ ಎಂದು ಹೇಳುತ್ತಿದ್ದಾರೆ. ಅಂಥ ಧಕ್ಕೆ ಇದರಿಂದ ಏನೂ ಬಂದಿಲ್ಲ. ಯಾವ ದೃಷ್ಟಿಯಿಂದ ನೋಡಿದರೂ ಇದು ಸರಿಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನೊಂದು ವಿಚಾರವೇನೆಂದರೆ, ಸರ್ಕಾರೀ ಅಧಿಕಾರಿಗಳು ಕೋರ್ಟಿಗೆ ಹೋಗಿ ನ್ಯಾಯ ದೊರಕಿಸಿಕೊಳ್ಳುವುದನ್ನು ತಪ್ಪಿಸಿದ್ದಾರೆಂದು ಕೆಲವರು ಹೇಳಿದರು. ಇದು ಹಾಗೇನೂ ಇಲ್ಲ. ಅವರು ಕೆಲಸ ಮಾಡಿಲ್ಲ, ಅದಕ್ಕೆ ಸಂಬಳ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅಷ್ಟೆ. ಗಝೆಟೆಡ್ ಪೋಸ್ಟುಗಳ ಬಗ್ಗೆ ಕೇಂದ್ರ ಸರ್ಕಾರ ತೀರ್ಮಾನ ಕೊಟ್ಟಿದ್ದಾರೆ. ಇನ್ನು ಎನ್. ಜಿ. ಓ ಬಗ್ಗೆ, ಡೆಪ್ಯೂಟಿ ತಾಹಸೀಲ್ದಾರರ ಬಗ್ಗೆ ಮತ್ತು ರೆವೆನ್ಯೂ ಇನ್‌ಸ್ಪೆಕ್ಟರುಗಳ ಬಗ್ಗೆ, ಸೀನಿಯಾರಿಟಿ ಲಿಸ್ಟ್ ಪೆಂಡಿಂಗ್ ಇದೆ. ಆದ್ದರಿಂದ ಅದನ್ನು ಇನ್ನು ಮುಂದೆ ಸರಿಯಾಗಿ ಮಾಡಿ, ನ್ಯಾಯವನ್ನು ಅವರಿಗೆ ದೊರಕಿಸಿಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿ

(ಶ್ರೀ ಕೆ. ಎಂ. ರುದ್ರಪ್ಪ)

ಕೇಡರ್,ಅಂಡ್ ರೆಕ್ರುಟ್‌ಮೆಂಟ್ ರೂಲ್ಸನ್ನು ಸರಿಯಾದ ರೀತಿಯಲ್ಲಿ ಮಾಡಬೇಕು. ಇದಕ್ಕೆ ಸಂಬಂಧಪಟ್ಟ ಸಚಿವರು ಹೆಚ್ಚಿನ ಮುತುವರ್ಜಿ ವಹಿಸಿಕೊಂಡು ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಿಲ್ಲನ್ನು ತಾರದೆ ಹೋದರೆ ಕೆಲಸ ಮಾಡದಿದ್ದರೂ ಸಂಬಳ ಕೊಡಿ ಎಂದು ಹೇಳಿದ ಹಾಗೆ ಆಗುತ್ತದೆ. ಬಡವರ ಹಿತರಕ್ಷಣೆ ಮಾಡಬೇಕೆಂದು ನಮ್ಮ ಉದ್ದೇಶ ಇರುವಾಗ ಇಂಥ ಕಾನೂನುಗಳನ್ನು ನಾವು ತರಬೇಕಾಗುತ್ತದೆ ಆದ್ದರಿಂದ ನಾನು ಇದನ್ನು ಸಂಪೂರ್ಣವಾಗಿ ಸ್ವಾಗತ ಮಾಡಿ, ಇದಕ್ಕೆ ಬೆಂಬಲ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಇ. ರಾಮಯ್ಯ (ಸಿರಗುಪ್ಪ) ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮುಂದಿರುವ ಬಿಲ್ಲನ್ನು ಸ್ವಾಗತ ಮಾಡುತ್ತಾ ಕೆಲವು ಮಾತುಗಳನ್ನು ಹೇಳ ಬಯಸುತ್ತೇನೆ. ನಮ್ಮ ಮಿತ್ರರಾದ ಚಂದ್ರಶೇಖರವರು ಹೇಳಿದಂತೆ ವಿರೋಧ ಪಕ್ಷದವರು ಯಾವ ಒಂದು ಆಧಾರವಿಲ್ಲದೆ ಇದನ್ನು ಅಪೋಸ್ ಮಾಡುತ್ತಿರುವುದನ್ನು ನೋಡಿದರೆ ಬಹಳ ವ್ಯಸನವಾಗುತ್ತಿದೆ. ನ್ಯಾಯ ಇರಲಿ, ನೀತಿ ಇರಲಿ ಅವರು ವಿರೋಧ ಮಾಡಿಯೇ ಮಾಡುತ್ತಾರೆ. ಇವತ್ತು ರಾಜ್ಯದ ಬೊಕ್ಕಸದಿಂದ ಹಣ ಕೊಡಬೇಕಾದ ಸಂದರ್ಭದಲ್ಲಿ ಇದನ್ನು ತಡೆಗಟ್ಟದಿದ್ದರೆ, ಯಾವ ರೀತಿ ಸಮಾಜವಾದವನ್ನು ತರುವುದಕ್ಕೆ ಸಾಧ್ಯವಿದೆ ಎಂದು ಯೋಚನೆ ಮಾಡಬೇಕು. ಸರಕಾರದವರು ಇವತ್ತು ತಂದಿರತಕ್ಕಂತಹ ಬಿಲ್ಲು ಅಭಿನಂದನೀಯವಾದುದು. ನಮ್ಮ ರಾಜ್ಯ ಎಂಥ ದುಸ್ಥಿತಿಯಲ್ಲಿದೆ ಎಂದು ಎಲ್ಲರಿಗೂ ಗೊತ್ತಿದೆ. ಇವತ್ತು ಮಳೆಯಿಲ್ಲದೆ ಬೆಳೆಯಿಲ್ಲದೆ ಕ್ಷಾಮ ಬಂದು ಪರಿಸ್ಥಿತಿ ಗಂಭೀರವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಹಣಕಾಸಿನ ವಿಚಾರವನ್ನು ನಾವು ನೋಡದೆ ಇದನ್ನು ಅಪೋಸ್ ಮಾಡುವುದು ಬಹಳ ವ್ಯಸನಕರವಾದ ಸಂಗತಿ. ಇಂಥ ಮಹತ್ವವಾದ ಮಸೂದೆಗೆ ಅವರು ಪ್ರೋತ್ಸಾಹ ಕೊಡಬೇಕಾಗಿತ್ತು. ಎರಡನೆಯದು ಏನೆಂದರೆ, ನಮ್ಮ ಮೈಸೂರು ದೇಶ ಹರಿದು ಹಂಚಿಹೋಗಿದ್ದದ್ದು ಈಗ ಒಂದಾಗಿದೆ. ಬಾಂಬೆ, ಮದ್ರಾಸ್, ಹೈದರಾಬಾದಿಗೆ ಸೇರಿದ್ದಂತಹ ಪ್ರದೇಶಗಳು ಈಗ ನಮ್ಮಲ್ಲಿ ಸೇರಿಕೊಂಡಿವೆ. ಅಂದರೆ ಈ 5 ಪ್ರದೇಶಗಳಲ್ಲಿ ಯಾವ ಒಂದು ರೂಲ್ಸ್ ಅಂಡ್ ರೆಗ್ಯುಲೇಶನ್ಸ್ ಇತ್ತು ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಿದರೆ, ಈ ವಿರೋಧಕ್ಕೆ ಅವಕಾಶ ಇರುತ್ತಿರಲಿಲ್ಲವೆಂದು ಕಾಣುತ್ತದೆ. ಈ ರೀತಿ ಅನೇಕ ತರದ ರೂಲ್ಸ್‌ಗಳಿರುವುದರಿಂದ ತೊಂದರೆಯಾಗಿದೆ, ಅದನ್ನು ಸರಿಪಡಿಸುವುದಕ್ಕೋಸ್ಕರ ಈ ಬಿಲ್ಲನ್ನು ತಂದಿದ್ದಾರೆ

3-00 P.M.

ಆದರೆ ಇದರ ವಿಚಾರದಲ್ಲಿ ಸರ್ಕಾರದವರು ಕೂಡ ಒಂದು ತಪ್ಪನ್ನು ಮಾಡಿದ್ದಾರೆಂದು ತೋರಿಸಬಹುದು. ರಾಜ್ಯಗಳ ಪುನರ್ವಿಂಗಡಣೆಯಾಗಿ ಇಲ್ಲಿಗೆ

(ಶ್ರೀ ಬಿ. ಇ. ರಾಮಯ್ಯ)

17-18 ವರ್ಷಗಳಾಯಿತು. ಆದಾಗ್ಯೂ ರಾಜ್ಯದ ಎಲ್ಲಾ ಭಾಗಗಳಿಗೂ ಸಂಬಂಧ ಪಟ್ಟಹಾಗೆ ಒಂದು ಯೂನಿಫಾರಂ ರೂಲ್ಸನ್ನು ಇಲ್ಲಿಯವರೆಗೂ ಜಾರಿಗೆ ತರದಿರು ವುದು ಒಂದು ಬಹಳ ವ್ಯಸನಕರವಾದ ವಿಷಯ. ಒಂದೊಂದು ಇಲಾಖೆಗೂ ಇರ ಬೇಕಾದ ಒಂದು ಸೀನಿಯಾರ್ಟಿ ಲಿಸ್ಟ್ ಇನ್ನೂವರೆಗೂ ಫೈನಲೈಜಾಗಲಿಲ್ಲ ಎಂದರೆ ಏನು ಹೇಳಬೇಕು? ಇದರಿಂದಲೇ ಈ ಒಂದು ಗೊಂದಲ. ಎಲ್ಲಾ ಇಲಾಖೆಗಳಲ್ಲೂ ಏಳುವುದಕ್ಕೆ ಮುಖ್ಯ ಕಾರಣ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು, ಈ ಅಧಿಕಾರಿಗಳ ವರ್ಗಾವರ್ಗಿ ವಿಚಾರದಲ್ಲಿ ಅಥವಾ ಬಡ್ತಿ ದೊರೆಯ ತಕ್ಕ ವಿಚಾರದಲ್ಲಿ ರಾಜಕೀಯ ಪಕ್ಷಗಳವರ ವಸೀಲಬಾಜಿ ನಡೆಯಬಾರದು ಎಂದು. ನಿಜ, ಇದಕ್ಕೆ ಯಾರೇ ಪ್ರೋತ್ಸಾಹ ಕೊಟ್ಟರೂ ಅದು ತಪ್ಪಾಗುತ್ತದೆ. ಆದರೆ ಸರ್ಕಾರಕ್ಕೂ ಕೂಡ ಈ ದಿವಸ ಈ ಒಂದು ರಾಜಕಾರಣಿಗಳ ಇನ್‌ಪ್ಲುಯೆನ್ಸನ್ನು, ತಡೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಉದಾಹರಣೆಗೆ ಹೇಳುವುದಾದರೆ ತಾ : 1-10-1953 ರಲ್ಲಿ ನಮ್ಮ ಬಳ್ಳಾರಿ ಜಿಲ್ಲೆ ಅಖಿಲ ಕರ್ನಾಟಕಕ್ಕೆ ಒಂದು ನಾಂದಿಯಾಗಿ ಮೈಸೂರು ರಾಜ್ಯಕ್ಕೆ ಸೇರಿತು. ಆದರೆ ಈ ದಿವಸ ನಮ್ಮ ಜಿಲ್ಲೆಯ ನೌಕರರ ಪರಿಸ್ಥಿತಿ ಅತ್ತಲಾಗಿ ಗಂಡೂ ಅಲ್ಲ ಇತ್ತಲಾಗಿ ಹೆಣ್ಣೂ ಅಲ್ಲ ಅನ್ನುವಂತಾಗಿದೆ. ಒಬ್ಬರು ಹೇಳುತ್ತಾರೆ ನಮ್ಮ ಬಳ್ಳಾರಿ ಜಿಲ್ಲೆ ಹೊಸಪಟ್ಟಿಯಲ್ಲಿ ಸಿನಿಯಾರ್ಟಿ ತೋರಿಸ ಬೇಕು ಎಂದು, ಆದರೆ ಆ ನೌಕರರು ಹೇಳುತ್ತಾರೆ ಅವರ ಹೆಸರುಗಳನ್ನು ಹಳೇ ಸೀನಿಯೊರ್ಟಿ ಪಟ್ಟಿಯಲ್ಲಿ ಸೇರಿಸಬೇಕು ಎಂದು. ಅಂತೂ ಈ ಗೊಂದಲ ಇನ್ನೂ ತಪ್ಪಲಿಲ್ಲ. ಅದಕ್ಕಾಗೇ ಈಗ ಈ ಮಸೂದೆಯಲ್ಲಿ ಹೇಳಿದಂತೆ ಈ ಗೊಂದಲ ದೆಶೆಯಿಂದ 4-5 ಕೋಟಿ ಹಣವನ್ನು ಸರ್ಕಾರದವರು ವಿನಾಕಾರಣ ಚೆಲ್ಲಬೇಕಾ ಗಿವೆ ಈ ದಿವಸ ಈ ಇಲಾಖೆಗಳಲ್ಲಿ ಮೊಖ್ತೇಸರರು ತಮ್ಮ ಖುಷಿ ಬಂದಹಾಗೆ ಪ್ರಮೋಷನ್‌ಗಳನ್ನು ಕೊಡುತ್ತಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಇರ ತಕ್ಕ ಒಂದೇ ಮಾರ್ಗ ಒಂದು ನಿರ್ದಿಷ್ಟವಾದ ಸೀನಿಯೊರ್ಟಿ ಪಟ್ಟಿಯನ್ನು ಮಾಡುವುದು. ಅದನ್ನು ಮಾಡದೆ ಏಕೆ ಕೈಬಿಟ್ಟಿದ್ದಾರೋ ತಿಳಿಯುವುದಿಲ್ಲ. ಈಗಲಾದರೂ ಇದನ್ನು ಕೂಡಲೆ ಮಾಡಬೇಕೆಂದು ಹೇಳುತ್ತೇನೆ. ಈ ದಿವಸ ಇಲಾಖೆಗಳಲ್ಲೆಲ್ಲಾ ದೊಡ್ಡದಾದ ರೆವಿನ್ಯೂ ಇಲಾಖೆಯಲ್ಲಿ ಒಂದು ನಿರ್ದಿಷ್ಟವಾದ ಸೀನಿಯಾರ್ಟಿ ಲಿಸ್ಟಿಲ್ಲ. ಅಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಯಾರಿಗೆ ಯಾವಾಗ ಬಡ್ತಿ ಸಿಗುತ್ತೆ ಎಂಬುದು ತಿಳಿಯುವುದಕ್ಕಾಗಿಲ್ಲ ಅಲ್ಲಿ ಕೆಲಸ ಮಾಡತಕ್ಕ ಜನ ರೆಲ್ಲಾ ಬಹಳ ಜಿಗುಪ್ಸೆಯಿಂದ ಕೂಡಿದ್ದಾರೆ. ಆಫೀಸುಗಳಲ್ಲಿ ನಡಯಬೇಕಾದ ಕೆಲಸ ಕಾರ್ಯಗಳು ಸಕಾಲಕ್ಕೆ ನಡೆಯುತ್ತಿಲ್ಲ. ಇನ್ನಾದರೂ ಸರ್ಕಾರದವರು ಒಂದು ನಿರ್ದಿಷ್ಟವಾದ ಅವಧಿಯೊಳಗೆ ಇದನ್ನು ಮಾಡುವುದಾಗಿ ಭರವಸೆ ಕೊಡ ಬೇಕಾದ್ದು ಅತ್ಯಗತ್ಯ.

(ಶ್ರೀ ಬಿ. ಇ. ರಾಮಯ್ಯ)

ಇನ್ನು ಈ ದಿವಸ ಸರ್ಕಾರದವರು ಮಾಡತಕ್ಕ ಅವಿವೇಕ ಏನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕರಣೀಕರ ಜಾಗದಲ್ಲಿ ವಿಲೇಜ್ ಅಕೌಂಟೆಂಟ್ ಗಳನ್ನು ನೇಮಕ ಮಾಡಿದ್ದಾರೆ. ಆದರೆ ಈ ದಿವಸ ಈ ಎರಡು ವರ್ಗದವರು ಕೆಲಸ ಮಾಡುತ್ತಿದ್ದಾರೆ. ಪ್ರತಿಯೊಬ್ಬರಿಗೂ 200 ರೂಪಾಯಿ ಸಂಬಳ ಅಂದರೆ ಏನಾಯಿತು ? ಇದರಲ್ಲೂ ಕೂಡ ವಸೀಲಬಾಜಿ ಕೆಲಸಕ್ಕೆ ಸರ್ಕಾರದವರು ಬಗ್ಗಿದ್ದಾರೆಂದು ಹೇಳಬಹುದು. ಈ ಹಣವನ್ನು ಉಳಿಸಿದ್ದರೆ ಬೇರೆ ಜನೋಪಕಾರದ ಕೆಲಸಗಳಿಗೆ ಬಳಸುವುದಕ್ಕೆ ಸಾಧ್ಯವಾಗುತ್ತಿತ್ತು. ಅದನ್ನು ತಪ್ಪಿಸದೆ ಒಂದು ಕೆಲಸಕ್ಕೆ ಇಬ್ಬರಿಗೆ ಸಂಬಳ ಕೊಡುತ್ತಿದ್ದಾರೆ ಸರ್ಕಾರದವರು ಆದಷ್ಟು ಜಾಗ್ರತೆ ಇಂಥದನ್ನು ತಡೆಗಟ್ಟಬೇಕು. ಇದನ್ನು ಮುಂದುವರಿಸಿದರೆ ಖಜಾನೆಯು ಲೂಟಿಯಾಗಿ ಹೋಗುತ್ತದೆ. ಈ ದಿವಸ ಸರ್ಕಾರದಲ್ಲಿ ವಿನಾಕಾರಣ ಸಿಬ್ಬಂದಿಯನ್ನು ಹೆಚ್ಚುಮಾಡಲಾಗಿದೆ. ಆದರೆ ಜನ್ನರಿಗೆ ಇದರಿಂದ ಆದ ಪ್ರಯೋಜನವೇನು ? ಒಬ್ಬ ಮಂತ್ರಿಗಳಿಗೆ ಒಂದು ಪೆಟಿಶನ್ ಕೊಟ್ಟರೆ 8 ದಿನ ಕಳೆದರೂ ಆ ಕಾಗದಗಳು ಒಂದು ರೂಮಿನಿಂದ ಇನ್ನೊಂದು ರೂಮಿಗೆ ಸಾಗುವುದಿಲ್ಲ. ಆ ರೂಮುಗಳಾದರೋ ಒಂದರ ಪಕ್ಕದಲ್ಲಿ ಒಂದಿದ್ದರೂ ಇಷ್ಟೇಕೆ ನಿಧಾನ ? ಇದರಿಂದ ಏನು ಗೊತ್ತಾಗುತ್ತದೆ ಎಂದರೆ ಅಡ್ಮಿನಿಸ್ಟ್ರೇಷನ್ನಿನಲ್ಲಿ ಅದಕ್ಷತೆ ಹೆಚ್ಚಿದೆ ಎಂಬುದನ್ನು ತೋರಿಸುತ್ತದೆ. ಇಂಥ ವಿಳಂಬವನ್ನು ತಡೆಗಟ್ಟಲು ಜನರು ದೂರಪ್ರದೇಶಗಳಿಂದ ಈ ಬೆಂಗಳೂರಿಗೆ ದುಡ್ಡನ್ನು ಖರ್ಚು ಮಾಡಿಕೊಂಡು ಬರುವುದಕ್ಕೆ ಸಾಧ್ಯವೇ ? ಹಿಂದೆ 1957-58ರಲ್ಲಿ ಈ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಮತ್ತು ಆಡಳಿತದಲ್ಲಿ ಮಿತವ್ಯಯವನ್ನು ತೋರಿಸುವುದಕ್ಕಾಗಿ ಒಂದು ಸಮಿತಿಯನ್ನು ಗೋರ್ವಾಲಾ ಅವರ ನೇತೃತ್ವದಲ್ಲಿ ಮಾಡಲಾಯಿತು. ಈಗಲಾದರೂ ಒಂದು ಎಕ್ಸ್‌ಪರ್ಟ್ ಕಮಿಟಿ ನೇಮಿಸಿ ಯಾವ ಇಲಾಖೆಗೆ ಎಷ್ಟು ಅಧಿಕಾರಿಗಳು, ಜವಾನರು ಮುಂತಾದವರು ಬೇಕು ಎಂದು ಪರಿಶೀಲಿಸಿ ಯೂನಿಫಾರಂ ಆದ ಒಂದು ವ್ಯವಸ್ಥೆ ಮಾಡಬೇಕು. ಉದಾಹರಣೆಗೆ ಈಗ 19–20 ಡಿ ಸಿ ಗಳಿದ್ದಾರೆ, ಒಂದು ಡಿ ಸಿ ಆಫೀಸಿನಲ್ಲಿ ಕಡಿಮೆ ಅಧಿಕಾರಿಗಳಿರಬಹುದು, ಇನ್ನೊಂದು ಕಡೆ ಜಾಸ್ತಿ ಸಿಬ್ಬಂದಿ ಇರಬಹುದು ಇದನ್ನು ನೋಡಿ ಒಂದು ಯೂನಿಫಾರ್ಮಿಟಿ ಇರುವಂತೆ ವ್ಯವಸ್ಥೆ ಮಾಡಬೇಕು. ಇದರಿಂದ ಹಣಕಾಸೂ ಉಳಿತಾಯವಾಗುವುದು. ಶೇಕಡ 40-50 ರಷ್ಟು ರಾಜ್ಯದ ಆದಾಯವನ್ನು ಶೇಕಡ ಎರಡೂವರೆಯಷ್ಟಿರುವ ಅಧಿಕಾರಿಗಳಿಗೆ ಕೊಡುತ್ತಿದ್ದಾರೆ ಎಂದು ರುದ್ರಪ್ಪನವರು ಹೇಳಿದರು ಇದನ್ನು ಗಮನಿಸಬೇಕು. ರಾಜ್ಯದ ಪರಿಸ್ಥಿತಿ ಹದಗೆಟ್ಟಿದೆ. ಇದನ್ನೆಲ್ಲಾ ಗಮನಿಸಿ ಒಂದು ಸಮಿತಿ ಮಾಡಿ ಸರಿಪಡಿಸಬೇಕೆಂದು ಸೂಚಿಸಿ ಈ ಬಿಲ್ಲನ್ನು ಸ್ವಾಗತಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದಿರುವ ಸಿವಿಲ್‌ರೈಟ್ಸ್‌ಗೆ ಸಂಬಂಧಪಟ್ಟ ಬಿಲ್ಲಿನಮೇಲೆ ಮಾತನಾಡುತ್ತಾ ವಿಶಾಲ ಮೈಸೂರಾದ ಮೇಲೆ ಕರ್ನಾಟಕ ಏಕೀಕರಣವಾದಮೇಲೆ ಹಳೇ ಮೈಸೂರಿನ ಅಧಿಕಾರಿಗಳಿಗೆ ಅನ್ಯಾಯವಾಗಿದೆ ಎಂದು ಹೇಳುತ್ತೇನೆ. ಈಗಾಗಲೆ ಮಾತನಾಡಿದ ಕೆಲವರು ಇದನ್ನು ಸ್ವಾಗತಿಸಿದ್ದಾರೆ, ಮತ್ತೆ ಕೆಲವರು ವಿರೋಧಿಸಿದ್ದಾರೆ. ಇದನ್ನು ನಾನು ವಿರೋಧಿಸುತ್ತೇನೆ. ಹಳೆಯ ಮೈಸೂರು ಅಧಿಕಾರಿಗಳಿಗೆ ಬಹಳ ಅನ್ಯಾಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ವಿಶಾಲ ಮೈಸೂರಾದಾಗ ಮುಂಬಯಿ, ಮದ್ರಾಸು ಮುಂತಾದ ಪ್ರದೇಶದ ಕೆಲವು ಭಾಗಗಳು ಸೇರಿಕೊಂಡವು. ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯ ಕಾನೂನುಗಳಿದ್ದುವು. ನಮ್ಮ ರಾಜ್ಯಕ್ಕೆ ಇತರ ರಾಜ್ಯಗಳವರು ಬಂದು ಸೇರಿದ ಮೇಲೆ ಎಲ್ಲರಿಗೂ ಅನ್ವಯವಾಗುವಂತೆ ಒಂದು ಕಾನೂನು ಮಾಡಲಾಯಿತು. ನಂತರ ಒಂದು ಸೀನಿಯಾರಿಟಿ ಲಿಸ್ಟ್ ಮಾಡಿದರು. ಇದರಲ್ಲಿ ಹಳೆಯ ಮೈಸೂರಿನವರಿಗೆ ಅನ್ಯಾಯವಾಗಿದೆ. ಮೈಸೂರಿಗೆ ಭಾರ ಬೀಳುವುದು ಎಂದು ಇತರ ರಾಜ್ಯಗಳಿಂದ ಕರ್ನಾಟಕಕ್ಕೆ ಬಂದವರಿಗೆ ಪ್ರಮೋಷನ್ನುಗಳನ್ನು ಕೊಟ್ಟು ಕಳಿಸಿದರು. ಇದರಿಂದ ಅವರಿಗೆ ಹೆಚ್ಚು ಸೌಲಭ್ಯ ದೊರೆತು ನಮ್ಮವರಿಗೆ ಅನ್ಯಾಯವಾಗಿದೆ. ಇಲ್ಲಿ 15-20 ವರ್ಷ ಸರ್ವಿಸ್ ಆದವರಮೇಲೆ ಹೊರಗಿನಿಂದ ಬಂದವರು 4-5 ವರ್ಷ ಸರ್ವಿಸ್ ಆಗಿರುವವರು ಸೀನಿಯಾರಿಟಿಯನ್ನು ಪಡೆದಿದ್ದಾರೆ. ಇದರಿಂದ ಅಧಿಕಾರಿಗಳಲ್ಲಿ ದಕ್ಷತೆ ಹೇಗೆ ನಿರೀಕ್ಷೆ ಮಾಡಲು ಸಾಧ್ಯ? ಬರಡು ಹಸುವಿನಲ್ಲಿ ಹಾಲನ್ನು ನಿರೀಕ್ಷೆಮಾಡಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಅತೃಪ್ತರಾಗಿರುವ ಅಧಿಕಾರಿಗಳಿಂದ ಒಳ್ಳೆಯದನ್ನು ನಿರೀಕ್ಷೆಮಾಡಲು ಸಾಧ್ಯವಿಲ್ಲ. ಅಲ್ಲದೆ ಇದರಿಂದ ಲಂಚರುಷುವತ್ತಿಗೆ ಅವಕಾಶವಾಗಿದೆ. ಕಾರಣ ಹೆಚ್ಚು ಸರ್ವಿಸ್ ಆಗಿರುವವರಿಗೆ ಪ್ರಮೋಷನ್ ಸಿಕ್ಕುವುದಿಲ್ಲ. ಕಡಿಮೆ ಸರ್ವಿಸ್ ಮಾಡಿರುವವರು ಸೀನಿಯರ್ ಆಗಿದ್ದಾರೆ ಆದುದರಿಂದ ಆದಷ್ಟು ಸಂಪಾದನೆ ಮಾಡಿ ರಿಟೈರ್ ಆಗೋಣ ಎಂಬ ಮನೋಭಾವನೆ ಅನೇಕ ಅಧಿಕಾರಿಗಳಲ್ಲುಂಟಾಗಿದೆ. ಇದರಿಂದ ದಕ್ಷತೆ ಹಾಳಾಗಿದೆ. ಈಗ ಕೋರ್ಟಿನಲ್ಲಿ ಒಂದು ತೀರ್ಮಾನವಾದರೆ ಎರಡು ಸಂಬಳ ಕೊಡಬೇಕಾಗುವುದು ಎಂಬ ಸಮಸ್ಯೆ ಇದೆ. ಆದರೆ ಪ್ರಮೋಷನ್ ಸಿಕ್ಕಬೇಕಾದಾಗ ಸಿಕ್ಕಿದ್ದರೆ ಅದಕ್ಕೆ ತಕ್ಕ ವೇತನ ಮೊದಲೇ ಪಡೆಯುತ್ತಿದ್ದರು. ಅನ್ಯಾಯವಾದುದರಿಂದ ಅವರಿಗೆ ಕೋರ್ಟಿನಲ್ಲಿ ತೀರ್ಮಾನವಾದಮೇಲೆ ಪರಿಹಾರ ಕೊಡಬೇಕಾದ್ದು ಸರಕಾರದ ಕರ್ತವ್ಯ. ಆದುದರಿಂದ ಕೋರ್ಟು ಪರಿಹಾರ ಕೊಡಬೇಕೆಂದಾಗ ಕೊಡುವುದು ನ್ಯಾಯವಾದುದು. ಅದನ್ನು ತಪ್ಪಿಸುವುದು ಯಾವ ವಿಧದಲ್ಲೂ ನ್ಯಾಯವಲ್ಲ. ಈ ಸಂದರ್ಭದಲ್ಲಿ ಒಂದು ಸಮಿತಿ ಮಾಡಿ ಯಾರ್ಯಾರು ಎಷ್ಟು ವರ್ಷ ಕೆಲಸ ಮಾಡಿದ್ದಾರೆ ಎಂದು ನೋಡಿ ಅದರ ಪ್ರಕಾರ ಪ್ರಮೋಷನ್ ಕೊಟ್ಟು ಅವರವರಿಗೆ ನ್ಯಾಯವಾಗಿ ದೊರೆಯಬೇಕಾದ ಪ್ರಮೋಷನ್ ವಗ್ಗೈರೆ ಕೊಟ್ಟರೆ ಆಡಳಿತ ಚೆನ್ನಾಗಿ ನಡೆಯುತ್ತದೆ. ಇಲ್ಲದಿದ್ದರೆ ಇಲ್ಲ. ಈಗಲೂ

(ಶ್ರೀ ಎಚ್. ಜಿ. ಚನ್ನಪ್ಪ)

ಕಾಲ ಮಿಂಚಿಲ್ಲ. ಸರ್ವಿಸ್ ರಿಜಿಸ್ಟರ್ ನೋಡಿದರೆ ಎಷ್ಟು ವರ್ಷ ಕೆಲಸ ಮಾಡಿದ್ದಾರೆ ಎಂದು ಗೊತ್ತಾಗುವುದು. ಯಾರಿಗೆ ಪ್ರಮೋಷನ್ ಸಿಕ್ಕಬೇಕೋ ಅವರಿಗೆ ಕೊಟ್ಟರೆ ಪ್ರತಿಯೊಬ್ಬ ಅಧಿಕಾರಿಯೂ ಚೆನ್ನಾಗಿ ಕೆಲಸ ಮಾಡುವರು. ಇಲ್ಲದಿದ್ದರೆ ನಿರುತ್ಸಾಹ ಬಂದು ಕೆಲಸ ಕುಂಠಿತವಾಗುವುದು. ಲಂಚರುಷುವತ್ತೂ ಹೆಚ್ಚುವುದು. ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಆದುದರಿಂದ ಈ ಬಿಲ್ಲು ಪಾಸಾಗುವುದಕ್ಕೆ ಮುಂಚೆ ಒಂದು ಸಮಿತಿ ಮಾಡಿ ಚರ್ಚಿಸಿ ನಂತರ ಈ ಸಭೆಯ ಮುಂದೆ ತಂದು ಅಂಗೀಕಾರ ಪಡೆಯುವುದೊಳ್ಳೆಯದು ಎಂದು ಇಷ್ಟು ಹೇಳಿ ಹಳೆಯ ಮೈಸೂರು ಅಧಿಕಾರಿಗಳಿಗಾಗಿರುವ ಅನ್ಯಾಯ ಸರಿಪಡಿಸಬೇಕು. ಇಲ್ಲದಿದ್ದರೆ ದಕ್ಷತೆ ಹೋಗುವುದು ಎಂದು ತಿಳಿಸಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ. ಯಂ. ಬಿ. ರಾಮಸ್ವಾಮಿ.—(ಅನೇಕಲ್) : ಸನ್ಮಾನ್ಯ ಸಭಾಧ್ಯಕ್ಷಿಣಿಯರೇ, ಈ ದಿವಸ ಏನು ಬಿಲ್ಲನ್ನು ತಂದಿದ್ದಾರೆ ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಬೆಂಬಲ ಅದಕ್ಕೆ ಕೊಟ್ಟು ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. 1-11-56ರಲ್ಲಿ ಕರ್ನಾಟಕದ ಏಕೀಕರಣವಾದ ಮೇಲೆ ಬಹುಶಃ ಅನೇಕ ಇಲಾಖೆಗಳಲ್ಲಿ ಇಂಟರ್‌ಸ್ಟೇಟ್ ಸೀನಿಯಾರಿಟಿ ಬಗ್ಗೆ ದೊಡ್ಡ ಆಂದೋಳನವಾಗಿದೆ. ಪ್ರಥಮವಾಗಿ ಮತ್ತು ಮೂಲಭೂತವಾಗಿ ಇಲಾಖೆಗಳ ಅಧಿಕಾರಿಗಳ ಸೀನಿಯಾರಿಟಿ ಪಟ್ಟಿ ಮಾಡುವುದಕ್ಕೆ ಘನ ಸರಕಾರದವರು ಕೊಟ್ಟಿದ್ದ ಆದೇಶಗಳನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡಿರುವ ಅನೇಕ ಉದಾಹರಣೆಗಳಿವೆ. ಉದಾಹರಣೆಗೆ ಅನಿಮಲ್ ಹಸ್ಬೆಂಡ್ರಿ ಇಲಾಖೆಯಲ್ಲಿ ಎಲ್ಲಾ ಅರ್ಹತೆಗಳನ್ನು ಪಡೆದಿದ್ದ ಒಬ್ಬ ಅಧಿಕಾರಿ ತನಗೆ ನ್ಯಾಯ ದೊರಯದೆ ಮೈಸೂರು ಹೈಕೋರ್ಟಿಗೆ ಹೋಗಿ ನ್ಯಾಯವನ್ನು ಪಡೆದ, ಕೋರ್ಟು ಆತ ಅರ್ಹನಾಗಿದ್ದಾನೆ, ಹೆಡ್ ಆಫ್‌ದಿ ಡಿಪಾರ್ಟ್‌ಮೆಂಟ್ ಆಗಬೇಕು ಎಂದು ನಿರ್ಣಯ ಮಾಡಿತು. ಸರಕಾರ ಅದನ್ನು ಕಾರ್ಯರೂಪಕ್ಕೆ ತಂದಿಲ್ಲ. ಇದರ ಬಗೆ ಅಪೀಲು ಸುಪ್ರೀಂ ಕೋರ್ಟಿಗೆ ಹೋಗಿ ವಜಾ ಆಗಿದೆ. ಈಗಿರುವ ಅನಿಮಲ್ ಹಸ್ಬೆಂಡ್ರಿ ಇಲಾಖೆ ಡೈರೆಕ್ಟರ ನೇಮಕ ಕ್ರಮಬದ್ಧವಾಗಿಲ್ಲ, ಅವರು ಎಲ್ಲಾ ಅರ್ಹತೆಗಳನ್ನು ಪಡೆದಿಲ್ಲ ಎಂದು ಸುಪ್ರೀಂ ಕೋರ್ಟು ಕೇಸನ್ನು ವಜಾಮಾಡಿತು. ಈಗ ನಮ್ಮ ಸರಕಾರ ಕೋರ್ಟಿನ ಆಜ್ಞೆಯನ್ನು ಜಾರಿಗೆ ತಂದಿಲ್ಲ. ಈಗಿರುವ ಡೈರೆಕ್ಟರು ವಿದೇಶಕ್ಕೆ ಹೋಗುವವರಿದ್ದಾರೆ. ಆಗ ಇನ್‌ಚಾರ್ಜ್ ಅರೇಂಜ್‌ಮೆಂಟ್ ಮಾಡಲು ಕಾನೂನು ರೀತ್ಯ ಯಾರು ಸೀನಿಯಾರಿಟಿ ಪಟ್ಟಿಯಲ್ಲಿ ಮೊದಲಿನವರೋ ಆ ಒಬ್ಬ ಅಧಿಕಾರಿ ಹೆಡ್‌ಕ್ವಾರ್ಟರಿನಲ್ಲಿರುವರು. ಆ ಅಧಿಕಾರಿಯನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಬೇಕೆಂದಿದೆ. ಆದರೆ ಮೊನ್ನೆ ವರದಿ ಬಂದಿರುವ ಪ್ರಕಾರ ಎ ಅಂಡ್ ಎಫ್‌ನಲ್ಲಿರುವ ಸೆಕ್ರೆಟರಿ ಇಂಥ

ವರಿಗೇ ಕೊಡಬೇಕೆಂದು ಹೇಳಿದ ಮೇಲೆ ಬಹುಶಃ ಸೀರಿಯಲ್ ನಂಬರು 3 ಅಥವಾ 4ನೆಯವರಿಗೆ ಕೊಟ್ಟಿರಬೇಕು, ಜೂನಿಯರಿಗೆ ಕೊಟ್ಟಿರುವುದು ಅರ್ಹವಾಗುವುದಿಲ್ಲ.

ಇದೇ ರೀತಿಯಲ್ಲಿ ನಡೆಯುತ್ತಾ ಹೋದರೆ, ಅಧಿಕಾರಿಗಳು ಅವರಲ್ಲಿರತಕ್ಕ ಇಂಟರೆಸ್ಟನ್ನು ಕಳೆದುಕೊಳ್ಳುತ್ತಾರೆ ಮತ್ತು ಅವರು ಈ ಸರ್ಕಾರದಲ್ಲಿ ಆಸಕ್ತಿಯನ್ನು ಕಳೆದುಕೊಂಡು ಎಂಟೈರ್ ಡಿಪಾರ್ಟ್‌ಮೆಂಟ್ ಹಾಳಾಗುವ ಸಂಭವ ಬರುತ್ತದೆ ಎಂದು ನನಗಾದರೂ ಅನ್ನಿಸುತ್ತದೆ. ಯಾವ ಒಬ್ಬ ಅಧಿಕಾರಿ ಕೆಲಸದಲ್ಲಿ ಅರ್ಹತೆಯನ್ನು ಪಡೆದುಕೊಂಡಿದ್ದಾನೆ, ಅವನಿಗೆ ಕಾನೂನು ರೀತ್ಯ ಎಲ್ಲಾ ಸವಲತ್ತುಗಳನ್ನು ಕಲ್ಪಿಸಿಕೊಡುವುದು ಎಲ್ಲರ ಕರ್ತವ್ಯ. ತಮ್ಮದೇ ಆದ ಧೋರಣೆಯನ್ನು ತಾಳಿ, ಜಾತೀಯ ಗೊಂದಲ, ಅಥವಾ ಸಂಬಂಧದ ಗೊಂದಲ ಮಾಡಿ ಸೀನಿಯಾರಿಟಿ ಲಿಸ್ಟ್ ಅವರದ್ದೇ ಮಾಡಿ ಇಲಾಖೆಗಳನ್ನು ಹಾಳುಮಾಡುವ ಒಂದು ಪರಿಸ್ಥಿತಿಗೆ ಕೆಲವು ಅಧಿಕಾರಿಗಳು ತಂದಿದ್ದಾರೆ. ಮತ್ತು ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಆದಾಗ ಅನೇಕ ಮಂದಿ ಹೊಸ ಮೈಸೂರಿನವರು ಈ ಕಡೆ ಬಂದರು. ಅವರು ಬಂದಾಗ ಅವರಲ್ಲಿ ಕೆಲವರು ಸರ್ವೀಸಿಗೆ ಸೇರಿ ಮೂರು ನಾಲ್ಕು ವರ್ಷಗಳಾದರೂ, ಇಲ್ಲಿ 18 ವರ್ಷ ಸರ್ವೀಸ್ ಮಾಡಿರತಕ್ಕ ಅಧಿಕಾರಿಗಳನ್ನು ಸೂಪರ್‌ಸೀಡ್ ಮಾಡಿದ್ದಾರೆ. ಪಟ್ಟಿಯನ್ನು ಮಾಡುವಾಗ ಸೆಂಟ್ರಲ್ ಗವರ್ನಮೆಂಟಿನವರು ಸುಸಜ್ಜಿತವಾಗಿ ಮಾಡಬೇಕು ಎಂದು ಡೈರೆಕ್ಷನ್ಸ್ ಕೊಟ್ಟಿರುತ್ತಾರೆ. ಆ ನೀತಿಯನ್ನು ಮತ್ತು ಅದರ ರೂಪರೇಖೆಗಳನ್ನು ಇಟ್ಟುಕೊಂಡು ಪಟ್ಟಿಯನ್ನು ತಯಾರು ಮಾಡಬೇಕು. ಡೈರೆಕ್ಷನ್ಸ್ ಕೊಟ್ಟರೂ ಇವರು ಸರಿಯಾದ ರೀತಿಯಲ್ಲಿ ಪಟ್ಟಿಯನ್ನು ತಯಾರು ಮಾಡಲಿಲ್ಲ. ಈ ರೀತಿ ಸೀನಿಯಾರಿಟಿ ಪಟ್ಟಿಯನ್ನು ತಲೆಕೆಳಗು ಮಾಡುವುದರಿಂದ ಇಲಾಖೆಗಳಲ್ಲಿ ಲಂಚಗುಳಿತನ ಹೆಚ್ಚಾಗಿ ಅಧಿಕಾರಿಗಳು ಕೆಲಸಮಾಡಲಿಕ್ಕೆ ಇಷ್ಟವಿಲ್ಲದೆ ಏನೋ ಬರಬೇಕು, ಸರ್ಕಾರದಲ್ಲಿ ಸೇರಿಬಿಟ್ಟಿದ್ದೇವೆ, ಏನೋ ಕಾಲಕಳೆದು ಹೋಗಬೇಕು ಎನ್ನುವ ಮನೋಭಾವವನ್ನು ತಳೆಯುತ್ತಾರೆ. ಇಲಾಖೆಗಳಲ್ಲಿ ರೆಡ್ ಟೇಪಿಸಂ ವಿಪರೀತವಾಗಿದೆ. ಮೊನ್ನೆ ತಾನೆ ಅಧಿಕಾರಕ್ಕೆ ಬಂದಿರತಕ್ಕವರ ಕೈಕೆಳಗೆ 20 ವರ್ಷ ಸರ್ವೀಸ್ ಮಾಡಿರತಕ್ಕವರು ಕೆಲಸ ಮಾಡಬೇಕು ಎಂದು ಅವರ ಮನಸ್ಸು ವ್ಯಾಕುಲವಾಗಿದೆ. ಆದ್ದರಿಂದ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮಾಡುವಾಗ ಕ್ರಮಬದ್ಧವಾಗಿ, ಗವರ್ನಮೆಂಟ್ ಆಫ್ ಇಂಡಿಯಾದವರು ಏನು ಆದೇಶ ಕೊಟ್ಟಿದ್ದಾರೆ ಅದನ್ನು ಚಾಚೂ ತಪ್ಪದೆ ಮಾಡಿದರೆ ಒಳ್ಳೆಯದು ಆದೀತು ಆದ್ದರಿಂದ ನಾನು ಮಾನ್ಯ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ, ಬಹಳ ಎಚ್ಚರಿಕೆಯಿಂದ ಯಾವ ಒಬ್ಬ ಅಧಿಕಾರಿ ನಿಜವಾಗಿಯೂ ಕೆಲಸಗಳನ್ನು ದಕ್ಷತೆಯಿಂದ ಮಾಡುತ್ತಾನೆ, ಅವನಿಗೆ ಅರ್ಹತೆ ಇದೆಯೇ, ಅಥವಾ ಅವನು ಸರಿಯಾದ ರೀತಿಯಲ್ಲಿ ನಡೆದು

(ಶ್ರೀ ಎಂ. ಬಿ. ರಾಮಸ್ವಾಮಿ)

ಕೊಳ್ಳುತ್ತಿದ್ದಾನೆಯೇ ಎನ್ನುವ ಬಗ್ಗೆ ವಿಚಾರಮಾಡಿ ಪ್ರಮೋಷನ್‌ಅನ್ನು ಕೊಡಬೇಕು ಅದು ಬಿಟ್ಟು ಕೇವಲ ಒತ್ತಡಕ್ಕೋಸ್ಕರ ಮಣಿದು ಪ್ರಮೋಷನ್ ಕೊಡುವುದು ಸಾಧ್ಯವಲ್ಲ.

ಮತ್ತೊಂದು ವಿಚಾರ, ಈ ಕಾನ್‌ಫಿಡೆನ್ಸಿಯಲ್ ರಿಪೋರ್ಟ್ಸ್ ಬಗ್ಗೆ, ಅನೇಕ ಡಿಪಾರ್ಟ್‌ಮೆಂಟಿನಲ್ಲಿ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ಸ್ ತಾವು ಬ್ರಹ್ಮ ಎಂದು ತಿಳಿದುಕೊಂಡಿದ್ದಾರೆ. ಕ್ಲಾಸ್ 1, ಕ್ಲಾಸ್ 2, ಕ್ಲಾಸ್ 3 ಅಧಿಕಾರಿಗಳ ಹಣೇಬರಹವನ್ನು ಇವರು ಬರೆದು ಮುಗಿಸಿರುವುದು ಅನೇಕ ಸಂದರ್ಭಗಳಲ್ಲಿ ನಡೆದಿದೆ. ಸೆಕ್ರೆಟರಿ ಮತ್ತು ಈ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ಸ್ ಇವರಿಗೆ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕು. ಅವನು ಹೇಳಿದ ಕೂಡಲೆ ಅವನಿಗೆ ಏನು ಬೇಕೋ ಅದನ್ನು ಮಾಡಿಕೊಡಬೇಕು, ಏನು ಬೇಕೋ ಅದನ್ನು ಸಪ್ಲೈ ಮಾಡಬೇಕು. ಅನೇಕ ವಿಚಾರಗಳಲ್ಲಿ ಇವರು ಸರಿಯಾದ ರೀತಿಯಲ್ಲಿ ನಡೆದುಕೊಳ್ಳದೆ ಹೋದ ಪಕ್ಷದಲ್ಲಿ ಅಧಿಕಾರಿಗಳ ಕಾನ್‌ಫಿಡೆನ್ಸಿಯಲ್ ರಿಪೋರ್ಟ್ಸ್‌ನ್ನು ಹಾಳುಮಾಡಿರುವುದು ನಮ್ಮ ಗಮನಕ್ಕೆ ಬಂದಿದೆ. ಒಂದು ಉದಾಹರಣೆ ಹೇಳಬೇಕಾದರೆ, ಪಿ. ಡಬ್ಲ್ಯೂ. ಡಿ. ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್ಸ್ ಆಗಿ ಪ್ರೊಮೋಷನ್ ಮಾಡುವಾಗ ಜೂನಿಯರ್ ಇಂಜಿನಿಯರ್ಸ್‌ನಲ್ಲಿ ಸೆಲೆಕ್ಟ್ ಆದವನು ಸೀರಿಯಲ್ ನಂಬರ್ 3ರಲ್ಲಿ ಇದ್ದವನಿಗೆ, ಒಂದು ವರ್ಷದ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಬಂದಿಲ್ಲ ಎಂದು ಪ್ರಮೋಷನ್‌ಅನ್ನು ತಡೆಹಿಡಿದರು. ಅವನು ನಿಷ್ಠೆಯಿಂದ ಬೆಳಗಾಂ ಜಿಲ್ಲೆಯಲ್ಲಿ ಕೆಲಸ ಮಾಡುವ ವ್ಯಕ್ತಿ. ಅದನ್ನು ಅವನು ತೆಗೆದುಕೊಂಡು ಬಂದಾಗ ಎರಡನೆಯ ವರ್ಷದ್ದು ಬಂದಿಲ್ಲ ಎಂದು ಮತ್ತೆ ನಿಲ್ಲಿಸಿದರು, ಹೀಗೆ ಆರು ತಿಂಗಳು ಡಿಲೇ ಮಾಡಿ ಅವನ ಸೀನಿಯೊರಿಟಿಯನ್ನು ಕೆಳಗೆ ಕಳುಹಿಸಿದರು, ಅವನದು ಇವತ್ತಿನ ದಿವಸ 16ನೇ ನಂಬರ್, ಈ ತರಹ ಮಾಡುತಾ ಹೋದರೆ ಲಂಚಗುಳಿತನ ಹೆಚ್ಚಾಗುತ್ತದೆ, ಮತ್ತು ಇನ್‌ಎಫಿಷಿಯನ್ಸಿ ಹೆಚ್ಚಾಗುತ್ತದೆ. ಇದರಿಂದ ಅಧಿಕಾರಿಗಳಲ್ಲಿ ಬೇಜಾರು ಬಂದಿದೆ, ಮತ್ತು ಇಲಾಖೆಗಳು ಹಾಳಾಗುವುದಕ್ಕೆ ಅವಕಾಶವಾಗುತ್ತದೆ.

ಇನ್ನು ರೆವೆನ್ಯೂ ಡಿಪಾರ್ಟ್‌ಮೆಂಟಿಗೆ ಬರಬೇಕಾದರೆ, ಅಲ್ಲಿ ಒಂದು ನಿರ್ದಿಷ್ಟವಾದ ಸೀನಿಯೊರಿಟಿ ಲಿಸ್ಟ್ ಇಲ್ಲ. ಈಗತಾನೇ ಲಿಸ್ಟ್ ಆಗಿದೆ ಎಂದು ಸಚಿವರು ಹೇಳಿದರು, ಆದರೆ ಅದು ಪರಿಪೂರ್ಣವಾಗಿಲ್ಲ. ಇನ್ನೂ ರೆವೆನ್ಯೂ ಇನ್ಸ್‌ಪೆಕ್ಟರ್‌ರದು, ಡೆಪ್ಯೂಟಿ ತಹಾಸೀಲ್ದಾರರದು, ತಹಾಸೀಲ್ದಾರರದು, ಅಸಿಸ್ಟೆಂಟ ಕಮಿಷನರದು, ಪ್ರತಿಯೊಂದರಲ್ಲಿಯೂ ನಿರ್ದಿಷ್ಟವಾದ ಸೀನಿಯೊರಿಟಿ ಲಿಸ್ಟ್‌ನ್ನು ಮಾಡಿಲ್ಲ. ಯಾರೋ ಒಬ್ಬ ರೆವಿನ್ಯೂ ಸೆಕ್ರೆಟರಿ ಬರುತ್ತಾರೆ, ಅವರು

ಒಂದು ಆರ್ಡರ್ ಮಾಡಿದರೆ, ಮತ್ತೊಬ್ಬರು ಬಂದು ಅದನ್ನು ಕಿತ್ತು ಹಾಕುವುದು ಮತ್ತು ಇನ್ನೊಂದು ಆರ್ಡರ್‌ಅನ್ನುಮಾಡುವುದು ಆಗಿದೆ. ರೆವೆನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಒಳ್ಳೆಯದಕ್ಷ ಅಧಿಕಾರಿಗಳು ಇಲ್ಲವೆಂದು ನಾನು ಹೇಳುವುದಿಲ್ಲ. ಇಂಥ ಅಧಿಕಾರಿಗಳು ಇದನ್ನೆಲ್ಲಾ ನೋಡಿ ಬೇಜಾರಾಗಿ ನಾವು ಸರ್ವೀಸಿಗೆ ಏತಕ್ಕಾದರೂ ಸೇರಿದ್ದೇವೆ ಎಂದು ಅವರಿಗೆ ವ್ಯಾಕುಲವುಂಟಾಗಿದೆ. ಆದ್ದರಿಂದ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮಾಡುವಾಗ ಸರಿಯಾದ ರೀತಿಯಲ್ಲಿ, ಕೂತು ಎಲ್ಲಾ ಲೋಪದೋಷಗಳನ್ನು ತೆಗೆದು, ಎಲ್ಲರ ಮಾಹಿತಿಗಳನ್ನು ತೆಗೆದುಕೊಂಡು, ಎಂದು ಅವನು ಡ್ಯೂಟಿಗೆ ಸೇರಿದ್ದು, ವಿದ್ಯಾ ಅರ್ಹತೆ ಏನು, ಆಯಾ ಕೆಲಸದಲ್ಲಿ ಸರಿಯಾದ ಅರ್ಹತೆಯನ್ನು ಅವನು ಪಡೆದಿದ್ದಾನೆಯೇ ಮತ್ತು ಅವನು ಕ್ರಮಬದ್ಧವಾದ ಸಂಖೆಯಲ್ಲಿದ್ದಾನೇ ಎನ್ನುವ ಬಗ್ಗೆ ವಿಚಾರ ಮಾಡಿ ನಿರ್ಧಾರಕ್ಕೆ ಬರುವುದು ಸಾಧು. ಅದುಬಿಟ್ಟು ನಮ್ಮ ಜಾತೀಯವನನ್ನು ಮೇಲಕ್ಕೆ ತರಬೇಕು ಎಂದು ಹೊರಟರೆ ಬಹುಶಃ ಡಿಪಾರ್ಟ್‌ಮೆಂಟುಗಳು ಹಾಳಾಗುತ್ತವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಇಲಾಖೆಗಳಲ್ಲಿ ಈ ಪ್ರವೃತ್ತಿ ಬೆಳೆದು ಬಂದಿದೆ.

ಹೆಲ್ತ್ ಡಿಪಾರ್ಟ್‌ಮೆಂಟಿನ ಬಗ್ಗೆ ಹೇಳುವುದಾದರೆ, ಅಲ್ಲಿ ಇನ್‌ಚಾರ್ಜ್ ಅರೇಂಜ್‌ಮೆಂಟ್ ಮಾಡುವಾಗ ನಾವು ಸರಿಯಾದ ರೀತಿಯಲ್ಲಿ ಮಾಡಿದ್ದೇವೆ ಎಂದು ಮಾನ್ಯ ಸಿದ್ದವೀರಪ್ಪನವರು ಹೇಳಿದರು. ನಾನಾದರೂ ಹೇಳುತ್ತಿದ್ದೇನೆ, ವಿಕ್ಟೋರಿಯಾ ಹಾಸ್ಪಿಟಲ್‌ನಲ್ಲಿ ಒಬ್ಬ ಡಾಕ್ಟರ್ ಡಬ್ಬಲ್ ಎಂ. ಎಸ್. (ಸರ್ಜರಿ) ಮಾಡಿದ್ದಾರೆ. ಮತ್ತು ಸೀನಿಯಾರಿಟಿಯಲ್ಲಿ ಮೊದಲನೆಯವರು. ಈತನ ಸೀನಿಯಾರಿಟಿಯನ್ನು ನಿರಾಕರಿಸಿದ್ದಾರೆ, ಮತ್ತೊಬ್ಬ ಡಾಕ್ಟರು ಒಂದೂವರೆ ವರ್ಷದಲ್ಲಿ ರಿಟೈರ್ ಆಗುತ್ತಾನೆ ಎಂದು ಅವನಿಗೆ ಪ್ರಮೋಷನ್ ಕೊಟ್ಟು, 16 ವರ್ಷ ಸರ್ವೀಸ್‌ನಲ್ಲಿರಬೇಕಾದಂಥ ಡಾಕ್ಟರನ್ನು ಹಿಂದಕ್ಕೆ ಹಾಕಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ.—ಆತನು ಯಾರು ಸ್ವಲ್ಪ ಹೇಳಿ?

ಶ್ರೀ ಎಂ. ಬಿ. ರಾಮಸ್ವಾಮಿ.—ಆತ ಸೀನಿಯಾರಿಟಿಯಲ್ಲಿ ಮೊದಲನೆಯವನಾಗಿರುತ್ತಾನೆ, ಮತ್ತು ಅರ್ಹತೆಯನ್ನು ಪಡೆದಿರುತ್ತಾನೆ ಅಂಥವನಿಗೆ ಇನ್‌ಚಾರ್ಜ್ ಇಟ್ಟರೆ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಜೂನಿಯರ್ ಆಗಿರುವವರನ್ನು ಯಾವುದೋ ಒತ್ತಡಕ್ಕೆ ಒಳಗಾಗಿ ಅಸೋಸಿಯೇಟ್ ಪ್ರೊಫೆಸರ್ ಮಾಡುವುದು ಅಥವಾ ಅಸಿಸ್ಟೆಂಟ್ ಪ್ರೊಫೆಸರ್ ಮಾಡುವುದು ಸಾಧುವಾದುದಲ್ಲ.

ಶ್ರೀ ಟಿ. ಎಂ. ಮಂಜುನಾಥ.—ಮಾನ್ಯ ಸಿದ್ದವೀರಪ್ಪನವರು, ಅವನಿಗೆ ಪ್ರಮೋಷನ್ ಕೊಟ್ಟಿಲ್ಲ, ಇನ್‌ಚಾರ್ಜ್ ಹಾಕಿದ್ದೇವೆ ಎಂದು ಹೇಳಿದರು, ಅದು ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಹೇಳಿ ?

ಶ್ರೀ ಎಂ. ಬಿ. ರಾಮಸ್ವಾಮಿ.—ಮಂತ್ರಿವರ್ಯರ ಗಮನಕ್ಕೆ ಅನೇಕ ವಿಷಯಗಳು ಬರುತ್ತಾ ಇಲ್ಲ ಎಂದು ನಾನು ನಂಬಿಕೊಂಡಿದ್ದೇನೆ. ಅನೇಕ ಅಧಿಕಾರಿಗಳು ಕೆಲವು ವಿಷಯಗಳನ್ನು, ಪ್ರಮೋಷನ್ ಮಾಡುವ ವಿಚಾರದಲ್ಲಿ ಆಗಲಿ, ಯಾವ ವಿಷಯದಲ್ಲಿಯೇ ಆಗಲೀ ಇವರಿಗೆ ಬೇರೆ ವಿಧಧ ಕಲ್ಪನೆ ಕೊಟ್ಟು, ನಿಜವಾಗಿ ಪ್ರಮೋಷನ್ ಯಾರಿಗೆ ಸಲ್ಲಬೇಕೋ ಅವರಿಗೆ ಸಲ್ಲುತ್ತಾ ಇಲ್ಲ ಎಂದು ನಾನು ಇವತ್ತಿನ ದಿವಸ ಹೇಳಬೇಕಾಗಿದೆ.

ಎಜುಕೇಷನ್ ಡಿಪಾರ್ಟಮೆಂಟಿನಲ್ಲಿ, ಪ್ರೊಬೇಷನರ್ಸ್ ಅನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿತೆಗೆದುಕೊಂಡರು. ಇವರನ್ನು ತೆಗೆದುಕೊಳ್ಳುವಾಗ ಒಂದು ನಿರ್ಧಿಷ್ಟವಾದ ರೂಲ್ಸ್ ಅನ್ನು ಅವರು ಇಟ್ಟುಕೊಂಡಿದ್ದಾರೆ ಎಂದು ನನ್ನ ಭಾವನೆ. ಯಾರು ಪಿ. ಎಸ್. ಸಿ. ಯಿಂದ ಬಂದಿದ್ದಾರೆ ಅವರನ್ನು ಕ್ಲಾಸ್ 1 ಕ್ಕೆ ಪ್ರೊಮೋಷನ್ ಕೊಡುವಾಗ ಎಲ್ಲಾ ವಿಚಾರದಲ್ಲೂ ನಮ್ಮ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಸ್ಟ್ರಿಕ್ಟ್ ಆಗಿ ಫಾಲೊ ಮಾಡಬೇಕು, ಆದರೆ ಇದನ್ನು ಸರಿಯಾಗಿ ಫಾಲೋ ಮಾಡುತ್ತಾ ಇಲ್ಲ. ಯಾವ ಒಬ್ಬ ಎ. ಡಿ. ಒ. ಡೈರೆಕ್ಟ್ ಆಗಿ ರಿಕ್ರೂಟ್‌ಮೆಂಟಿನಲ್ಲಿ ಬಂದಿದ್ದಾನೆ. ಅವನಿಗೆ ಡೆಪ್ಯುಟಿ ಡೈರೆಕ್ಟರ್ ಪೋಸ್ಟ್ ಸಿಗಬೇಕಾಗಿತ್ತೋ ಅದನ್ನು ಸರಿಯಾದ ರೀತಿಯಲ್ಲಿ ಅವನಿಗೆ ಕೊಡುತ್ತಾ ಇಲ್ಲ. ಕಾನ್‌ಫಿಡೆನ್ಷಿಯಲ್ ರಿಪೋರ್ಟ್ ಸರಿಯಿಲ್ಲ, ನಿನ್ನ ಯೋಗ್ಯತೆ ಸರಿಯಿಲ್ಲ, ನಿನಗೆ ಅರ್ಹತೆ ಇಲ್ಲ ಎಂದು ಹೇಳಿ ಜೂನಿಯರ್ ಪೋಸ್ಟ್ ಆಫೀಸರುಗಳನ್ನು ಮೇಲಕ್ಕೆ ತಂದಿದ್ದಾರೆ.

3-30 P.M.

ಶ್ರೀ ಟಿ. ಎಂ. ಮಂಜುನಾಥ.—ಇಲಾಖಾ ಪ್ರಕಾರ ಹೇಳುತ್ತಾ ಇದ್ದೀರಿ. ಅವರ ಹೆಸರನ್ನು ಹೇಳಿಬಿಡಿ. ಮಂತ್ರಿಗಳು ಗುರುತು ಹಾಕಿಕೊಳ್ಳುತ್ತಾರೆ.

ಶ್ರೀ ಎಂ. ಬಿ ರಾಮಸ್ವಾಮಿ.—ಹೇಳುತ್ತೇನೆ, ಈ ಒಂದು ಸೀನಿಯಾರಿಟಿ ಪಟ್ಟಿ ಏನು ಇದೆ ಅದನ್ನು ಸರಿಯಾದ ವ್ಯವಸ್ಥೆಯಲ್ಲಿ ಮಾಡಬೇಕು. ದಕ್ಷ ಅಧಿಕಾರಿಗಳಿಗೆ ಹೆಚ್ಚು ಉತ್ತೇಜನ ಕೊಡಬೇಕು ಮತ್ತು ಅವರಿಗೆ ಅನುಕೂಲವಾದ ರೀತಿಯಲ್ಲಿ ಕಾನೂನು ರೀತ್ಯಾ ಕಾನೂನು ಪ್ರಕಾರ ಅವರಿಗೆ ಇನ್‌ಸೆಂಟಿವ್ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಸಿಸ್ಟೆಂಟ್ ಕಮೀಷನರುಗಳನ್ನು ಪ್ರಮೋಷನ್ ಮಾಡುವಾಗ, ಎಲ್ಲಾ ಇಲಾಖೆಯಲ್ಲಿ ಪ್ರಮೋಷನ್ ಕೊಡುತ್ತಾ ಇದ್ದರೂ ರೆವಿನ್ಯೂ ಇಲಾಖೆಯಲ್ಲಿ ಪ್ರಮೋಷನ್ ನಿಲ್ಲಿಸಿದ್ದಾರೆ ಎಂದು ನನಗೆ ಗೊತ್ತಾಗಿದೆ. ಏತಕ್ಕಾಗಿ ಎಂದರೆ ಡೆಪ್ಯುಟಿ ಕಮೀಷನರ್ ಆಗಬೇಕಾದಂಥ 6—7 ಜನ ಹರಿಜನ ಅಧಿಕಾರಿಗಳು ಇದ್ದಾರೆ.

ಅಧ್ಯಕ್ಷರು:—ಇದು ಪ್ರಮೋಷನ್ ಕೊಡುವ ಬಿಲ್ಲೇ ?

ಶ್ರೀ ಎಂ. ಬಿ ರಾಮಸ್ವಾಮಿ:—ಬಹುಶ: ಬೇರೆ ಯಾರಾದರೂ ಆಗಿದ್ದರೆ ಪ್ರಮೋಷನ್ ಕೊಡುತ್ತಾ ಇದ್ದರು; ಎಂದು ನಂಬಿಕೊಂಡಿದ್ದೇನೆ. ಒಂದರಿಂದ ಏಳರವರೆಗೆ ಹರಿಜನ ಅಸಿಸ್ಟೆಂಟ್ ಕಮೀಷನರಿಗೆ ಇವತ್ತಿನ ದಿವಸ ಪ್ರಮೋಷನ್ ಕೊಟ್ಟಿದ್ದಾರೆ. ಅವರು ಬಹುಶಃ ಡೆಪ್ಯುಟಿ ಕಮೀಷನರ್ ಆಗುತ್ತಿದ್ದರು. ಜಾತಿ ಗೊಂದಲದಿಂದಲೇ ಪ್ರಮೋಷನ್ ನಿಲ್ಲಿಸಿದ್ದಾರೆ. ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟನಲ್ಲಿ ಇದ್ದಾಗ್ಯೂ ಅವರಿಗೆ ಬಡ್ತಿ ಸಹ ಕೊಟ್ಟಿಲ್ಲ. ಇದನ್ನು ಸರಿಪಡಿಸ ಬೇಕೆಂದು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ.

ಇನ್ನು ಸೆಕ್ರೆಟರಿಯೇಟ್ ವಿಚಾರದಲ್ಲಿ ಒಂದು ಮಾತು ಹೇಳಿ ಮುಗಿಸುತ್ತೇನೆ. ಅಸಿಸ್ಟೆಂಟ್‌ರಿಂದ ಹಿಡಿದು ಸೆಕ್ಷನ್ ಆಫೀಸರ್ ಮತ್ತು ಅಂಡರ್ ಸೆಕ್ರೆಟರಿಗಳವರೆಗೆ ಇದ್ದಾರೆ. ನನಗೆ ತಿಳಿದಮಟ್ಟಿಗೆ ಕ್ಲಾಸ್ 4 ರಿಂದ ಬಂದಿರತಕ್ಕವರು ಅಂಡರ್ ಸೆಕ್ರೆಟರಿಗಳು ಆಗಿದ್ದನ್ನು ನಾನು ನೋಡಿದ್ದೇನೆ. ಡೆಪ್ಯುಟಿ ಸೆಕ್ರೆಟರಿಗಳು ಆಗಿದ್ದವರನ್ನು ನೋಡಿದ್ದೇನೆ. ಸೀನಿಯಾರಿಟಿ ಲಿಸ್ಟ್ ಮಾಡಿದಾಗ ಸರಿಯಾದ ರೀತಿಯಲ್ಲಿ ಅಲ್ಲೂ ಮಾಡಿಲ್ಲ. ಪ್ರತಿಯೊಂದು ಸೆಕ್ಷನ್‌ನಲ್ಲೂ ಪ್ರತಿಯೊಂದು ಡಿಪಾರ್ಟ ಮೆಂಟಿನಲ್ಲೂ ಅವರದೇ ಆದ ಒಂದು ಸೀನಿಯಾರಿಟಿ ಪಟ್ಟಿ ಮಾಡಿ ಯಾರು ನಿಜವಾಗಿ ಅರ್ಹತೆ ಪಡೆದು ಇರುತ್ತಾರೋ ಅಂಥವರ ಬಗ್ಗೆ ನಿರ್ಲಕ್ಷ್ಯಮಾಡಿದ್ದಾರೆ. ಸೆಕ್ರೆಟರಿಯೇಟ್‌ನಲ್ಲಿ ಅನೇಕರು ದಕ್ಷ ಅಧಿಕಾರಿಗಳೂ ಇದ್ದಾರೆ. ಅವರಿಗೆ ಇನ್ನೂ ಸೀನಿಯಾರಿಟಿ ಪಟ್ಟಿ ಪ್ರಕಾರ ಬಡ್ತಿ ದೊರೆತ್ತಿಲ್ಲ. ಕಾರಣ ಈ ಒಂದು ಸೀನಿಯಾರಿಟಿ ಪಟ್ಟಿಯನ್ನು ಸರಿಯಾಗಿ ಮಾಡಿದ್ದಾಗ್ಯೂ ಸಹ, ಸರಿಯಾದ ಕಾಲದಲ್ಲಿ ಅವರಿಗೆ ಪ್ರಮೋಷನ್ ಕೊಟ್ಟಿಲ್ಲ. ಪಿ. ಎಸ್. ಸಿ. ಯಿಂದ ಕೆಲವರನ್ನು ರಿಕ್ರೂಟ್ ಮಾಡಿದರೂ ಅಲ್ಲಿ ಸೀನಿಯಾರಿಟಿ ಕಳೆದುಕೊಂಡರು. ಹೀಗೆ ಮಾಡುವುದರಿಂದ ಇಲಾಖೆಗಳಲ್ಲಿ ಲಂಚಗುಳಿತನ ಹೆಚ್ಚಾಗುತ್ತದೆ ; ಮತ್ತು ಅನೇಕ ಗೊಂದಲಕ್ಕೆ ಈಡಾಗುವುದಕ್ಕೆ ಅವಕಾಶವಾಗಿದೆ. ಅಧಿಕಾರಿಗಳು ಏನು ಕೆಲಸ ಮಾಡಬೇಕೆಂದು ಅದನ್ನು ಶಕ್ತಿ ಇಟ್ಟುಕೊಂಡು ಬಂದಿದ್ದಾರೆ ಅವರು ಕಳೆದುಕೊಂಡಿದ್ದಾರೆ. ಅದಕ್ಕೆ ಅವಕಾಶ ಕೊಡದೆ ಇನ್ನುಮುಂದೆ ಆದರೂ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಪರಿಪೂರ್ಣ ಮಾಡಿ ಘನ ಸರ್ಕಾರದವರು ಏನು ಆದೇಶ ಕೊಟ್ಟಿದ್ದಾರೆ ಅದನ್ನು ಚಾಚೂ ತಪ್ಪದೇ ಅನುಸರಿಸಿದರೆ, ಎಲ್ಲಾ ಅಧಿಕಾರಿಗಳಿಗೂ ಎಲ್ಲಾ ಇಲಾಖೆಗಳಲ್ಲಿ ಒಂದು ನ್ಯಾಯ ದೊರೆಯುತ್ತದೆಂದು ನಾನು ನಂಬಿಕೊಂಡಿದ್ದೇನೆ. ಈ ಸಂದರ್ಭದಲ್ಲಿ ಇಷ್ಟೊಂದು ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷಿಣೀಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್ :— ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನಾನು ಮಂಡಿಸಿದ ಈ ಬಿಲ್ಲಿನ ಮೇಲೆ ಅನೇಕ ಮಾನ್ಯ ಸದಸ್ಯರು ನಾನಾ ರೀತಿ ಯಿಂದ ತಮ್ಮ ಅಭಿಪ್ರಾಯಗಳನ್ನು ಸದನದ ಮುಂದೆ ವ್ಯಕ್ತಪಡಿಸಿದ್ದಾರೆ. ಹೀಗೆ ವ್ಯಕ್ತಪಡಿಸುತ್ತಿರುವಾಗ ಕೆಲವು ಸದಸ್ಯರು ಕೋರ್ಟಿನ ಹುಕುಂಗಳನ್ನು ಅಮಾನ್ಯ ಮಾಡುವ ರೀತಿಯಲ್ಲಿ ಈ ಬಿಲ್ಲನ್ನು ತಂದಿದ್ದಾರೆ, ಮತ್ತು ಸುಪ್ರೀಂ ಕೋರ್ಟಿನಿಂದ ಆದಂಥ ಹುಕುಂ ಕೂಡ ಸೂಪರ್‌ಸೀಡ್ ಮಾಡುವ ರೀತಿಯಲ್ಲಿ ಬಿಲ್ಲನ್ನು ಮಾಡಿ ದ್ದಾರೆ ಇಂಥ ಅಧಿಕಾರ ಈ ಬಿಲ್ಲಿನಲ್ಲಿ ಸರಕಾರಕ್ಕೆ ಕೊಟ್ಟಿದೆ ಎಂದು ಹೇಳಿದ್ದಾರೆ. ಅದೂ ಅಲ್ಲದೆ ಕೆಲವೊಂದು ಕಾನೂನಿನಲ್ಲಿರುವ ತೊಂದರೆ ಅಥವಾ ತೊಡಕುಗಳನ್ನು ಸಹ ಶ್ರೀಮಾನ್ ಕೃಷ್ಣನ್‌ರವರು ಇದರಲ್ಲಿ ಪಾಯಿಂಟ್ ಔಟ್ ಮಾಡಿದ್ದಾರೆ. ಸರ್ಕಾರ ದವರು ತಾವು ಮಾಡಿದಂಥ ಮಿಸ್ಟೇಕ್ಸ್ ಅಥವಾ ಮಿಸ್‌ಡೀಡ್ಸ್‌ನಿಂದ ಪಾರಾಗು ವುದಕೋಸ್ಕರ ಒಂದು ಬಿಲ್ಲನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಎನ್ನುವಷ್ಟರಮಟ್ಟಿಗೆ ಕೆಲವು ಸದಸ್ಯರು ಹೇಳಿದ್ದಾರೆ. ಆದರೆ ನಿಜ ವಾಗಿ ಇದ್ದ ಪರಿಸ್ಥಿತಿಯನ್ನು ಅರಿತುಕೊಂಡಾಗ ನಾನು ನಂಬುತ್ತೇನೆ. ಮಾನ್ಯ ಸದಸ್ಯರು ಈ ಬಗ್ಗೆ ಮಾಡಿದಂಥ ಟೀಕೆಗಳು ಅಷ್ಟೊಂದು ಸಮರ್ಥನೀಯ ವಲ್ಲ ಎಂದು ಅವರಷ್ಟಕ್ಕೆ ಅವರೇ ಮನವರಿಕೆ ಮಾಡಿಕೊಳ್ಳುತ್ತಾರೆ ಎನ್ನುವ ಭರವಸೆ ಯನ್ನು ನಾನು ತಾಳುತ್ತೇನೆ.

ಅಧ್ಯಕ್ಷಣಿಯವರೇ, ಸನ್ಮಾನ್ಯ ಸದಸ್ಯರಿಗೆ ಗೊತ್ತಿದ್ದ ಹಾಗೇ ಇಂಟಿಗ್ರೇಷನ್ ಅಥವಾ ರೀ ಆರ್ಗನೈಜೇಷನ್ ಮೇಲಿಂದ ಮೇಲೆ ಆಗತಕ್ಕ ವಿಷಯವಲ್ಲ. ಇದು ಎಕ್ಸ್ಟ್ರಾರ್ಡಿನರಿ ಇವೆಂಟು, ಇಂಥ ಎಕ್ಸ್‌ಟ್ರಾರ್ಡಿನರಿ ಇವೆಂಟಿನಲ್ಲಿ ಕೂಡ ನಾನಾ ಭಾಗಗಳಿಂದ ಬಂದಂಥ ಸರ್ಕಾರಿ ನೌಕರರನು ಇಂಟಿಗ್ರೇಟ್ ಮಾಡಬೇಕಾದರೆ ಬಹಳ ಕಷ್ಟದಾಯಕವಾದುದು ಎನ್ನುವ ಮಾತನ್ನು ಮಾನ್ಯ ಸದಸ್ಯರು ನಂಬುತಾ ರೆಂದು ಭಾವಿಸುತ್ತೇನೆ. ಇಂಟಿಗ್ರೇಷನ್ ಆದನಂತರ ನಾನು ಮೊದಲೇ ಹೇಳಿದ ಹಾಗೆ ಸೆಂಟ್ರಲ್ ಗೌವರ್ನಮೆಂಟ್ ಇದರ ಸಂಪೂರ್ಣ ಅಧಿಕಾರವನ್ನು ಇಟ್ಟು ಕೊಂಡಿದ್ದಾರೆ ಇಂಟರ್ ಸ್ಟೇಟ್ ಸೀನಿಯೊರಿಟಿ ಲಿಸ್ಟ್‌ನ್ನು ಮಾಡುವ ಅಧಿಕಾರ ನಮ್ಮ ಸರ್ಕಾರದ್ದು ಅಲ್ಲ. ಅದು ಸಂಪೂರ್ಣವಾಗಿ ಸೆಂಟ್ರಲ್ ಗೌವರ್ನಮೆಂಟಿನ ಅಧಿಕಾರ ಆದರೆ ಪ್ರಾವಿಷನ್‌ಲ್ ಲಿಸ್ಟ್ ತಯಾರು ಮಾಡುವಾಗ ಸೆಂಟ್ರಲ್ ಗೌವರ್ನಮೆಂಟಿನವರು ಕೆಲವೊಂದು ಪ್ರಿನ್ಸಿಪಲ್‌ಗಳನ್ನು ಹಾಕಿಕೊಟ್ಟಿದ್ದಾರೆ. ನಿನ್ನೆ ನಾನು ಹೇಳಿದ್ದೆ, ನೇಚರ್ ಆಫ್ ಪೋಸ್ಟ್, ಕ್ವಾಲಿಫಿಕೇಷನ್ ರೆಸ್ಪಾನ್ಸಿಬಿಲಿಟಿ ಮತ್ತು ಪೇ ಅಟಾಚೆಡ್ ಟು ದಿ ಪೋಸ್ಟ್ ಗಮನದಲ್ಲಿಟ್ಟುಕೊಂಡು, ಇಕ್ವೇಷನ್ ಆಫ್ ಪೋಸ್ಟ್ ಮಾಡಿ ಎಂದು ಕೆಲವು ನಿಯಮಗಳನ್ನು ಕೇಂದ್ರ ಸರಕಾರದವರು ಹಾಕಿಕೊಟ್ಟಿದ್ದರು. ಆ ದೃಷ್ಟಿಯಿಂದ ಇಕ್ವೇಷನ್ ಮಾಡುವಾಗ ಆಯಾಯಾ ಡಿಪಾರ್ಟ್‌ಮೆಂಟ್ ಮಾಹಿತಿಗಳನ್ನು ಸಂಕಲನ ಮಾಡಿ ಪ್ರಾವಿಷನಲ್ ಸೀನಿಯೊರಿಟಿ ಲಿಸ್ಟ್ ಮಾಡುವಾಗ ಬಹಳ ಕಷ್ಟಪಟ್ಟುಕೊಂಡು ಅನೇಕ ದಿವಸದವರೆಗೆ ಮಾಡಿ

ದ್ದಾರೆ. ಪ್ರೊವಿಷನಲ್ ಲಿಸ್ಟ್ ಮಾಡಿದ ನಂತರ ಆ ಪ್ರೊವಿಷನಲ್ ಲಿಸ್ಟ್‌ನ ಆಧಾರದ ಮೇಲೆ ಪುನಃ ಫೈನಲ್ ಲಿಸ್ಟ್ ಆಗುವವರೆಗೆ ಪ್ರಮೋಷನನ್ನು ಕೊಟ್ಟು ಕೊಂಡು ಹೋಗಬೇಕೆಂಬ ನಿರ್ದೇಶನವನ್ನು ಕೇಂದ್ರ ಸರಕಾರದವರು ಇತ್ತಿದ್ದಾರೆ. ಆ ಪ್ರಕಾರ ಕೆಲವು ಆಫೀಸರುಗಳ ಮತ್ತು ಕೆಲವು ನೌಕರರುದಾರರು ಪ್ರೊವಿಷನಲ್ ಲಿಸ್ಟ್ ಮಾಡುವಾಗ ಈ 4 ಪ್ರಿನ್ಸಿಪಲ್‌ಗಳನ್ನು ಸರಿಯಾಗಿ ಮತ್ತು ಸಮಂಜಸವಾಗಿ ಪರಿಶೀಲನೆ ಮಾಡಲಿಲ್ಲ. ಇನ್ ಕರೆಕ್ಟ್ ಇನ್‌ಫರ್ಮೇಷನ್ ಅಥವಾ ಡೇಟಾ ಮೇಲೆ ಹೆಚ್ಚು ಕಡಿಮೆ ಮಾಡಿದ್ದಾರೆ ಎನ್ನುವ ತಿಳುವಳಿಕೆಯ ಮೇಲೆ ರಿಟ್ ಪೆಟಿಷನ್‌ಗಳನ್ನು ಹಾಕಿ ಪ್ರೊವಿಷನಲ್ ಲಿಸ್ಟ್ ಚಾಲೆಂಜ್ ಮಾಡಿ ಹೈ ಕೋರ್ಟಿಗೆ ಹೋದರು.

Mr. Deputy Spekaer in the Chair.

ಹೈಕೋರ್ಟಿಗೆ ಸೇರಿದಂಥ ರಿಟ್ ಪೆಟಿಷನ್‌ಗಳಿಗೆ ಸ್ಟೇ ಸಹ ಕೊಟ್ಟಿದ್ದಾರೆ. ಹೈಕೋರ್ಟು ಕೊಟ್ಟಂಥ ಸ್ಟೇಗಳ ಪರಿಣಾಮವಾಗಿ, ಪ್ರೊವಿಜನಲ್ ಲಿಸ್ಟ್ ಅಮಲ ಜಾರಿ ಆಗದೆ ಹಾಗೆಯೇ ಉಳಿದಿವೆ. ಇದೂ ಅಲ್ಲದೆ ಅನೇಕ ರಿಟ್ ಪೆಟಿಷನ್ನು ಗಳನ್ನು ಪ್ರೊವಿಜನಲ್ ಲಿಸ್ಟ್ ಆಧಾರದ ಮೇಲೆ ಮಾಡುತ್ತಾ ಇರುವಾಗ ಹೈಕೋರ್ಟಿನ ಇನ್‌ಟರ್‌ಫಿಯರೆನ್ಸಿನಿಂದಾಗಿ, ಮತ್ತು ಸ್ಟೇ ಪರಿಣಾಮದಿಂದಾಗಿ ಇದರಲ್ಲಿ ಫೈನಲ್ ಸೀನಿಯಾರಿಟಿ ಲಿಸ್ಟ್ ಮಾಡುವುದು ಸ್ವಲ್ಪ ವಿಳಂಬವಾಗಿದೆ. ಇದಕ್ಕೆ ಸೆಂಟ್ರಲ್ ಗವರ್ನಮೆಂಟ್ ಅಡ್ವೈಸರಿ ಕಮಿಟಿ ಇದೆ. ಆ ಅಡ್ವೈಸರಿ ಕಮಿಟಿಯವರು ಅಬ್‌ಜಕ್ಷನ್ ಕಾಲ್‌ಫಾರ್ ಮಾಡಿ ಕೊನೆಯ ನಿರ್ಣಯ ಸೆಂಟ್ರಲ್ ಗವರ್ನಮೆಂಟಿನವರು ತೆಗೆದುಕೊಂಡು ಫೈನಲ್ ಲಿಸ್ಟ್ ಮಾಡಬೇಕಾದರೆ ಅವರಿಗೆ ತುಂಬ ಕಾಲ ಹಿಡಿದಿದೆ ಉದಾಹರಣೆಯಾಗಿ ತಮಗೆ ಹೇಳುವುದಾದರೆ, 39-40 ಸಾವಿರ ಜನ ನೌಕರರು ಇದ್ದಂಥ ಸಮಯದಲ್ಲಿ ಪ್ರತಿಯೊಬ್ಬ ಆಫೀಸರ ವಿಷಯ ವಾಗಿ ಮಾಹಿತಿ ಕಲೆಕ್ಟ್ ಮಾಡಿ, ಅಬಜಕ್ಷನ್ ಸ್ವೀಕಾರ ಮಾಡಿ ಕೊನೆಗೆ ನಿರ್ಣಯ ತೆಗೆದುಕೊಳ್ಳಬೇಕಾದರೆ, ಈ ದೊಡ್ಡ ಸಮಸ್ಯೆ ಬಗ್ಗೆ ಸಾಕಷ್ಟು ವ್ಯಾಳ್ಯವಿನಿಮಯ ವಾಗಿದೆ ಎನ್ನುವುದನ್ನು ಒಪ್ಪುತ್ತಾರೆಂದು ನಾನು ಭರವಸೆ ತಾಳಿದ್ದೇನೆ. ನಿನ್ನೆ ನಾನು ಹೇಳಿದ ಹಾಗ 39 ಸಾವಿರ ನೌಕರದಾರರಲ್ಲಿ ಕೇವಲ 1800 ಜನರ ಬಗ್ಗೆ ಮಾತ್ರ ಫೈನಲ್ ಲಿಸ್ಟ್ ಆಗಿಲ್ಲ ಎನ್ನುವುದನ್ನು ತಮ್ಮ ನಜರಿಗೆ ಸಾದರು ಪಡಿಸಿದ್ದೇನೆ. ಇದರಲ್ಲಿ ಕೇಂದ್ರ ಸರ್ಕಾರದ್ದಾಗಲೀ, ಅಥವಾ ನಮ್ಮ ರಾಜ್ಯ ಸರ್ಕಾರದ್ದೇ ಆಗಲಿ ಯಾವುದೇ ತಪ್ಪು ಅಥವಾ ಹೊಣೆಗಾರಿಕೆ ಇದೆ ಎನ್ನುವ ಮಟ್ಟಿನ ಮಾತ್ರ ನಾನು ಒಪ್ಪುತ್ತಾ ಇಲ್ಲ. ಆಯಾಯ ಕಾಲಕ್ಕನುಗುಣವಾಗಿ ಅದರಲ್ಲಿ ವೇಳ್ಯ ವಿನಿಮಯವಾಗಿದೆಯೇ ಹೊರತು, ಅವರು ಚಾಲೆಂಜ್ ಮಾಡುವಂಥ ರೀತಿ ನೀತಿಗಳನ್ನು ನೋಡಿ ಸಾಮಾನ್ಯವಾಗಿ ಅಲ್ಲಿ ತೊಡಕು ಬಂದಿವೆ ಎಂದು ಹೇಳ ಬೇಕೇ ವಿನಾ ಒಮ್ಮೆ ಪ್ರೊವಿಜನಲ್ ಲಿಸ್ಟ್ ಮಾಡಿದ ನಂತರ ಹೆಡ್ ಆಫ್ ದಿ ಡಿಪಾರ್ಟಮೆಂಟ್ ಇಚ್ಛಾನುಸಾರವಾಗಿ ಪ್ರಮೋಷನ್ಸ್ ಕೊಟ್ಟುಕೊಂಡು ಬಂದಿಲ್ಲ,

(ಶ್ರೀ ಡಿ. ಕೆ. ನಾಯ್ಕರ್)

ಅಲ್ಲಿ ಅನ್ಯಾಯ ಮಾಡಿದೆ ಎನ್ನುವುದನ್ನು ಸರ್ಕಾರ ಒಪ್ಪುತ್ತಾ ಇಲ್ಲ.

ಶ್ರೀ. ಎಂ. ಎಸ್. ಕೃಷ್ಣನ್.—ಪ್ರೊವಿಜನಲ್ ಲಿಸ್ಟ್ ಮಾಡಿದ್ದು ಸರಿ ಅದರಲ್ಲಿ ತೊಡಕುಗಳು ಇಲ್ಲ, ಸರಿಯಾಗಿ ನ್ಯಾಯವಾಗಿ ಮಾಡಿದ್ದಾರೆ ಎಂದು ನಿಮ್ಮ ಅಭಿಪ್ರಾಯವೇ ?

ಶ್ರೀ ಡಿ. ಕೆ. ನಾಯ್ಕರ್.—ಪ್ರೊವಿಜನಲ್ ಲಿಸ್ಟ್ ಮಾಡುವಾಗ ನಾನು ಹೇಳಿದ ಹಾಗೆ 39,000 ಜನರ ಪ್ರೊವಿಜನಲ್ ಸೀನಿಯಾರಿಟಿ ಲಿಸ್ಟ್ ಮಾಡಬೇಕಾದರೆ ಡಿಫೆಕ್ಟಿವ್ ಇನ್‌ಫರ್‌ಮೇಷನ್‌ನಿಂದ ಅಥವಾ ಇನ್ನು ಯಾವುದೇ ರೀತಿಯಿಂದ ಒಂದೆರಡು ಹೆಚ್ಚು ಕಡಿಮೆ ಆಗಿರಬಹುದು. ಅದು ಸ್ವಯಂಕೃತ ಅಪರಾಧ ಎಂದು ಹೇಳಿದರೆ ನಾನು ಹೊಣೆಯಲ್ಲ. ಅದು ಬುದ್ಧಿಪೂರ್ವಕವಾಗಿ ಮಾಡಿದಂಥ ಕೃತ್ಯಗಳು ಇದ್ದರೆ ಮಾತ್ರ ಅವನ್ನು ಅಪವಾದ ಎಂದು ತಿಳಿದು ಕೊಂಡಿದ್ದೇನೆ. ಆದುದರಿಂದ ಯಾವುದಾದರೂ ಒಂದು ಕಾರಣದಿಂದ ಸೀನಿಯಾರಿಟಿ ಪಟ್ಟಿಯಲ್ಲಿ ಹೆಚ್ಚು ಕಡಿಮೆ ಆದಾಗ ಅದನ್ನು ಹೆಡ್ ಆಫ್ ಡಿಪಾರ್ಟ್‌ಮೆಂಟ್ಸ್ ಬುದ್ಧಿಪೂರ್ವಕವಾಗಿ ಮಾಡಿದ್ದಾರೆ ಎಂಬುದನ್ನು ನಾನು ಒಪ್ಪುತ್ತಾ ಇಲ್ಲ. ಅದೂ ಅಲ್ಲದೆ ನಾನು ಹೇಳಿದೆ ಏನೆಂದರೆ ದೇಶಾದ್ಯಂತ ಮಾಹಿತಿ ಕಲೆಕ್ಟ್ ಮಾಡುವಾಗ ಅವರಲ್ಲಿ ಹೆಚ್ಚು ಕಡಿಮೆ ಆಗಿದ್ದ ಕಾರಣ ರಿಟ್ ಪೆಟಿಷನ್ಸ್ 1969 ರಿಂದ ಬಂದಿದೆ. ಫೈನಲ್ ಸೀನಿಯಾರಿಟಿ ಲಿಸ್ಟ್ 1964—65 ರಿಂದ ಬರಬೇಕಾಗಿತ್ತು. ಪ್ರೊವಿಜನಲ್ ಫೈನಲ್ ಲಿಸ್ಟ್‌ನಲ್ಲಿ ತಮ್ಮ ಸ್ಥಾನಮಾನಗಳು ಹೆಚ್ಚು ಕಡಿಮೆ ಆದುದರಿಂದ ಅನೇಕ ಜನ ಗೌರ್ನಮೆಂಟ್ ಸರ್ವೆಂಟ್ಸ್ ರಿಟ್ ಪೆಟಿಷನ್ಸ್ ಮಾಡಿದಂಥ ಉದಾಹರಣೆಗಳು ನನ್ನ ನಜರಿಗೆ ಬಂದಿದೆ. ಆದುದರಿಂದ ಕಾಲಾವಕಾಶ ಇಂಥಾದ್ದರಲ್ಲಿ ವ್ಯಯ ಆಗಿದೆಯೇ ಹೊರತು, ಇದರಲ್ಲಿ ಕೇಂದ್ರ ಸರ್ಕಾರದ ಬೇಜವಾಬ್ದಾರಿ ಅಥವಾ ನಮ್ಮ ರಾಜ್ಯಸರ್ಕಾರದ ಬೇಜವಾಬ್ದಾರಿ ಇದಕ್ಕೆ ಇಲ್ಲ. ನಮ್ಮ ಮಿಸ್‌ಡೀಡ್ಸ್ ನಮ್ಮ ಮಿಸ್ಟೇಕ್ಸ್ ರೆಕ್ಟಿಫೈ ಮಾಡುವುದಕ್ಕೋಸ್ಕರ ಈ ಬಗೆಯ ಬಿಲ್ ತಂದಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇಲ್ಲ. ಅದು ಸಮರ್ಥನೀಯವಲ್ಲ ಎಂದು ನಾನು ತಮ್ಮ ಎದುರಿಗೆ ಹೇಳಬಯಸುತ್ತೇನೆ.

ಕಾನೂನು ಬಗ್ಗೆ ನಾನು ಹೇಳಿದೆ, ಮಾನ್ಯ ಕೃಷ್ಣನ್‌ರವರು ಹೇಳಿದ ಹಾಗೆ ಯಾವ ಪೋಸ್ಟ್‌ನಲ್ಲಿ ಒಬ್ಬ ಮನುಷ್ಯ ಅಧಿಕಾರ ವಹಿಸಿಕೊಂಡು ಕೆಲಸ ಮಾಡುತ್ತಾನೋ ಅಂಥ ಮನುಷ್ಯನಿಗೆ ಮಾತ್ರ ಆ ಸ್ಥಾನಕ್ಕೆ ಅನುಗುಣವಾಗಿ ಅಥವಾ ಆ ಪೋಸ್ಟ್‌ಗೆ ಅನುಗುಣವಾಗಿ ಇರತಕ್ಕ ಪಗಾರವನ್ನು ಹೊಂದಲಿಕ್ಕೆ ಅರ್ಹ ಪರಿಸ್ಥಿತಿ ಇದೆ. ಈಗ ದುಡಿಯಲಿಕ್ಕೆ ಸ್ಥಾನ ಇಲ್ಲದೆ ಇರುವಾಗ ಕೆಳಗಿನ ತರಗತಿಯ ಸ್ಥಾನ

ರಿಂದ ಹೈಯರ್ ಸ್ಕೇಲ್‌ಗೆ ಪ್ರಮೋಷನ್ ಕೊಟ್ಟಾಗ, ಅರಿಯರ್ಸ್ ಕೊಡಬೇಕು ಎನ್ನುವುದು ನಿಜವಾದ ತತ್ವಕ್ಕೆ ವಿರುದ್ಧವಾದುದು. ಹೈಕೋರ್ಟ್ ಕೆಲವು ಕೇಸ್‌ಗಳಲ್ಲಿ 3 ವರ್ಷದವರೆಗೆ ಅರಿಯರ್ಸ್ ಕೊಡಬೇಕು ಎಂದು ತೀರ್ಮಾನ ಕೊಟ್ಟಿದೆ. ಇನ್ನು ಕೆಲವು ಕೇಸ್‌ಗಳಲ್ಲಿ ಅರಿಯರ್ಸ್ ಕೊಟ್ಟೇ ಇಲ್ಲ. ಮತ್ತೆ ತಮಗೆ ಕಾನೂನು ರೀತ್ಯಾ ಹೇಳುವುದಾದರೆ, ಸ್ವಾಮಿ ಇದರಲ್ಲಿ ಅರಿಯರ್ಸ್ ಸಿಕ್ಕಬೇಕಾದರೆ, ಹೈಕೋರ್ಟಿನವರು ಕೊಡುವಂಥಾದ್ದು ಸಮರ್ಥನೀಯ ಎಂದು ನಾನು ಹೇಳುವುದಿಲ್ಲ. ಅರಿಯರ್ಸ್ ಕ್ಲೈಮ್ ಮಾಡಬೇಕಾದರೆ ಲಿಮಿಟೇಷನ್ ಬಾಧೆ ಬರುತ್ತದೆ. ಅದನ್ನು ಪುನಃ ಕೋರ್ಟಿಗೆ ಹೇಳಿ ಪಡೆಯುವುದಕ್ಕೆ ಅವಕಾಶ ಇದೆ. ಆದ್ದರಿಂದ ಹೈಕೋರ್ಟಿಗೆ ನಾವು ಯಾವುದೇ ರೀತಿಯ ಅವಮಾನ್ಯ ಮಾಡುವುದಾಗಲೀ........

ಶ್ರೀ ಎಂ. ಎಸ್. ಕೃಷ್ಣನ್ :—ಅರಿಯರ್ಸ್ ಕೊಡುವುದರಲ್ಲಿ ಲಿಮಿಟೇಷನ್ ಬಾಧೆ ಹೇಗೆ ಬರುತ್ತದೆ? ಏನಾದರೂ ಮೊದಲೇ ಟೈಂ ಬಾರ್‌ನೊಳಗೆ ರಿಟ್ ಪಿಟಿಷನ್ ಹಾಕದೇ ಹೋದರೆ, ಆಗಬಹುದು. ರಿಟ್ ಹಾಕಿ ವ್ಯವಹಾರ ನಡೆಯುತ್ತಿದ್ದರೆ ಅವರ ಮೇಲೆ ಕೋರ್ಟ್ ತೀರ್ಮಾನ ಮಾಡಿದಮೇಲೆ ಬಾಧೆ ಹೇಗೆ ಬರುತ್ತದೆ?

ಶ್ರೀ ಡಿ. ಕೆ. ನಾಯ್ಕರ್ :—ಮನಿ ರಿಕವರಿ ಮಾಡಬೇಕಾದರೆ ಯಾವ ಲಿಮಿಟೇಷನ್ ಬಾಧೆ ಬರುತ್ತದೋ, ಅದು ಬರುತ್ತದೆ. ಅದಕ್ಕೋಸ್ಕರ ಈಗ ನಾನು ಹೇಳಿದ ಹಾಗೆ ಹೈಕೋರ್ಟಿನ ಹುಕುಂ ಅನ್ನು ಡೆಫರ್ ಮಾಡುವ ರೀತಿಯಲ್ಲಿ ಬಿಲ್ಲನ್ನು ತಂದಿದ್ದೇವೆ ಎನ್ನುವುದನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತೇನೆ. ಕಾನೂನು ರೀತಿ ಹೇಳುವುದಾದರೆ, ಮಾನ್ಯ ಸದಸ್ಯರಿಗೆ ತಿಳಿಸಪಡಿಸುತ್ತೇನೆ, ರೆಟ್ರಾಸ್ಪೆಕ್ಟೀವ್ ಕಾನೂನು ಮಾಡುವಂಥ ಅಧಿಕಾರ ಲೆಜಿಸ್ಲೇಚರ್‌ಗೆ ಇದೆ ಎಂದು ಸುಪ್ರೀಂಕೋರ್ಟ್ ಹೋಲ್ಡ್ ಮಾಡಿದ್ದಾರೆ. ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಆಗಿ ಕಾನೂನು ಮಾಡುವ ಅಧಿಕಾರ ಲೆಜಿಸ್ಲೇಚರ್‌ಗೆ ಇದೆ ಎಂದು ಹೇಳುವಾಗ, ರೆಟ್ರಾಸ್ಪೆಕ್ಟೀವ್ ಎಫೆಕ್ಟಾಗಿ ಜಾರಿಗೆಬರುವಂಥ ಕಾನೂನು ನಾವು ತಂದಿದ್ದೇವೆ. 1-11-1956 ರಿಂದ ಇಂಥ ಒಂದು ಕಾನೂನನ್ನು ನಾವು ಜಾರಿಗೆ ತಂದಿದ್ದೇವೆ. ಸುಪ್ರೀಂಕೋರ್ಟಿನವರ ನಿರ್ಣಯದ ಪ್ರಕಾರ ಈ ಬಗ್ಗೆ ಲೆಜಿಸ್ಲೇಚರ್ ಕಾಂಪಿಟೆಂಟ್ ಆಗಿದೆ ಎಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ:—ರೆಟ್ರಾಸ್ಪೆಕ್ಟೀವ್ ಅಂದರೆ, ಎಷ್ಟು ವರ್ಷದ ಹಿಂದಿನಿಂದ?

ಶ್ರೀ ಡಿ. ಕೆ. ನಾಯ್ಕರ್ :—ಎಷ್ಟು ವರ್ಷ ಹಿಂದಿನಿಂದಲೂ ಆದರೂ ತರಬಹುದು.

ಶ್ರೀ ಎಚ್. ಡಿ. ದೇವೇಗೌಡ :—ನಾಯ್ಕರ್‌ರವರು ಹುಟ್ಟದೇ ಇದ್ದ ಹಿಂದಿನ ಕಾಲದಿಂದಲೂ ತೆಗೆದುಕೊಳ್ಳಬೇಕು ಎಂದು ಅರ್ಥವೇ?

ಶ್ರೀ ಡಿ. ಕೆ. ನಾಯ್ಕರ್ :—ನಾನು ಕಾಂಪಿಟೆನ್ಸ್ ಆಫ್ ಲೆಜಿಸ್ಲೇಚರ್ ವಿಚಾರ ಹೇಳಿದೆ.

ಶ್ರೀ ಎಂ. ಎಸ್. ಕೃಷ್ಣನ್: ಲೆಜಿಸ್ಲೇಚರ್ ರೆಟ್ರಾಸ್ಪೆಕ್ಟೀವ ಎಫೆಕ್ಟಿನಿಂದ ಕಾನೂನು ಮಾಡುವುದನ್ನು ನಾವು ಪ್ರಶ್ನೆ ಮಾಡಲಿಲ್ಲ.

The question is whether the Government can bring forward such a Legislation. Even if the Legislature is competent, from other points of view, which you have professed and which you are saying and about which you are not prepared to answer, you cannot bring forward such a Legislation.

ಶ್ರೀ ಡಿ. ಕೆ. ನಾಯ್ಕರ್.—ರೆಟ್ರಾಸ್ಪೆಕ್ಟೀವೆ ಎಫೆಕ್ಟ್ ಕಾನೂನು ಮಾಡುವ ಅಧಿಕಾರ ನಾವು ಹೊಂದಿದ ಮೇಲೆ ಇಂತಹ ಕಾನೂನನ್ನು ನಾವು ತರುವುದರಲ್ಲಿ ಯಾವ ತಪ್ಪೂ ಇಲ್ಲ, ಕಾನೂನಿನ ಬಾಧೆಯೂ ಇಲ್ಲ. ಇನ್ನೊಂದು ಸಮರ್ಥನೆ ನಾವು ಹೇಳುವುದಾದರೆ, ಇದರಲ್ಲಿ ಏನಾಗುತ್ತದೆ, ಈ ಕಾನೂನು ಜಾರಿಗೆ ಬಂದರೆ, ಹೈಕೋರ್ಟಿನ ಹುಕುಂಗಳು ಎಷ್ಟರ ಮಟ್ಟಿಗೆ ಇನ್‌ಆಪರೇಟಿವೆ ಆಗಿ ಉಳಿಯುತ್ತದೆ ಎಂದರೆ, ಅರಿಯರ್ಸಿಗೆ ಮಾತ್ರ ಪ್ರಮೋಷನ್‌ಗೆ ಇಲ್ಲ. ಆ ಹುಕುಂನ ಆಧಾರದ ಮೇಲೆ ತೀರ್ಮಾನ ಕೊಡುವಂಥಾದ್ದು ಉಳಿಯುತ್ತದೆ. ಯಾರು ಯಾರು ಸೀನಿಯಾರಿಟಿ ಹುಕುಂನ ಪ್ರಕಾರ ಬಡ್ತಿ ತೆಗೆದುಕೊಳುವುದಕ್ಕೆ ಅರ್ಹತೆ ಪಡೆದಿದ್ದಾರೋ ಅವರಿಗೆ ಪ್ರಮೋಷನ್ ಎಲ್ಲಾ ಬರುತ್ತದೆ. ಅವರು ಕಳೆದು ಕೊಳ್ಳುವುದೇನೆಂದರೆ, ಕೇವಲ ಅರಿಯರ್ಸ್ ಮತ್ತು ಕೇಂದ್ರ ಸರ್ಕಾರದವರು ಪಂಜಾಬ್ ಸರ್ಕಾರಕ್ಕೆ ಈ ಬಗ್ಗೆ ಆದೇಶ ನೀಡಿದಾಗ, ಅವರು ಅದನ್ನು ಅನುಸರಿಸಿದ್ದಾರೆ.

ಶ್ರೀ ವಿ. ಎಸ್. ಪಾಟೀಲ್.—ಆನರಬಲ್ ಮಿನಿಸ್ಟರ್ ಲಿಮಿಟೇಷನ್ ಕಾನೂನಿನ ಚೌಕಟ್ಟಿನಲ್ಲಿ ಬರಬೇಕೆಂದು ಹೇಳುತ್ತಾರೆ. When my right is being justified in a Court of Law, when it is justiceable, it taks 10-15 year's time from the date from which my right has been declared, I will be entitled to claim reimbursement for all the losses now faced.

ಇದರಲ್ಲಿ ಲಿಮಿಟೇಷನ್ ಏನಿದೆಯೋ ಅದನ್ನು ರೀಎಗ್ಜಾಮಿನ್ ಮಾಡಬೇಕು.

ಶ್ರೀ ಡಿ. ಕೆ. ನಾಯ್ಕರ್ :—ನಾನು ಮೊದಲೇ ಹೇಳಿದ ಹಾಗೆ ಆ ಲಿಮಿಟೇಷನ್ನಿನಲ್ಲಿ ಅವರಿಗೆ ಚಾನ್ಸ್ ಕೊಡಬಹುದಾಗಿತ್ತು. ಆ ರೀತಿಯಾಗಿ ಪ್ರೊಟೆಕ್ಷನ್ ಕೊಡುವುದಕ್ಕಿಂತ ಅವರು ಕೇಳಿದಂಥ ಹಕ್ಕನ್ನು ನಿರ್ದಿಷ್ಟಪಡಿಸಿ ಅವರ ಚಾರ್ಜನ್ನು ಸಿವಿಲ್ ಕೋರ್ಟಿಗೆ ವಹಿಸಿ ಪರಿಹಾರ ಪಡೆಯಲಿಕ್ಕೆ ಅವರಿಗೆ ಬಿಟ್ಟುಕೊಡಬಹುದಾಗಿತ್ತು. ಕೆಲವರಿಗೆ ಅದೇ ರೀತಿಯಾಗಿ 3 ವರ್ಷ ಕೊಡಿಸಿದ್ದಾರೆ. ಇನ್ನು ಅಧಿಕಾರದ ಬಗ್ಗೆ ಹೇಳುವಾಗ ಹಾಗೂ ರಿಟ್ರಾಸ್ಪೆಕ್ಟಿವ್ ಎಫೆಕ್ಟ ಬಗ್ಗೆ ಕಾನೂನು ಮಾಡುವಾಗ ಲೆಜಿಸ್ಲೇಚರ್‌ನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಿ ಎಂಬ ಪ್ರಶ್ನೆ ಇಲ್ಲಿ ಇಲ್ಲ. ಆದ್ದರಿಂದ ಕಾನೂನು ರೀತ್ಯ ಈ ಬಿಲ್ಲನ್ನು ತರುವುದರಲ್ಲಿ ಸರ್ಕಾರಕ್ಕೆ ಏನೇನು ತೊಂದರೆ ಇರುತ್ತದೆಂಬುದನ್ನು ಈ ಸದನದ ಮುಂದೆ ವ್ಯಕ್ತಪಡಿಸಬೇಕೆಂದು ನಾನು ಮಾನ್ಯ ಸದಸ್ಯರನ್ನು ಕೇಳಿದ್ದಕ್ಕೆ ಅವರಲ್ಲಿ ಕೆಲವರು ಇದರಲ್ಲಿ ಡಬ್ಬಲ್ ಪೇಮೆಂಟ್ ಆಗುವುದಿಲ್ಲವೇ ಎಂದು ಕೇಳಿದರು. ಸುಪ್ರೀಂ ಕೋರ್ಟಿನ ನಿರ್ಣಯದ ಮೇರೆಗೆ ಸ್ಟ್ಯಾಟುಟರಿ ಎವಿಡೆನ್ಸನ್ನು ಎಕ್ಸರ್‌ಸೈಜ್ ಮಾಡುವಾಗ 1970ನೇ ಮತ್ತು 1967ನೇ ಇಸವಿಯ ಕೇಸಸ್ ಬಗ್ಗೆ ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದೇವೆ. ಈ ಅಪಾಯಿಂಟ್‌ಮೆಂಟ್ ಪ್ರಶ್ನೆ ಆರ್ಟಿಕಲ್ 15ರ ಪ್ರಕಾರ ಕನಸಿಡರ್ ಮಾಡುವಾಗ-ಅಪಾಯಿಂಟ್‌ಮೆಂಟ್ ಇನ್‌ಕ್ಲೂಡ್ಸ್ ಪ್ರೊಮೋಷನ್ ಎಂದು ಹೇಳಿದೆ. ಅದನ್ನು ತಾವು ತಿಳಿದುಕೊಳ್ಳಲಿಲ್ಲ. ಅಪಾಯಿಂಟ್‌ಮೆಂಟ್ ಅಂದರೆ ಪ್ರೊಮೊಷನ್ಸ್ ಇನಕ್ಲೂಡ್ ಆಗುತ್ತದೆ. ನಾನು ಬೇಕಾದರೆ ರೂಲಿಂಗ್‌ಗಳನ್ನು ಕೊಡುತ್ತೇನೆ. ತಾವು ಓದಿಕೊಳ್ಳಬಹುದು. ಆದ್ದರಿಂದ ಈ ಪ್ರೊಮೊಷನ್ಸ್‌ನಲ್ಲಿ ಬಾಕಿ ಕೇಸ್‌ನಲ್ಲಿ ಯಾರ ಪೋಸ್ಟ್ ಹೋಲ್ಡ್ ಮಾಡಿದೆ, ಸ್ಟಾಟುಟರಿ ಎವಿಡೆನ್ಸ್ ಎಕ್ಸರ್‌ಸೈಜ್ ಮಾಡಿದೆಯೋ ಅಂತಹವರು ಮಾತ್ರ ಅರಿಯರ್ಸ್ ಪಡೆಯಬೇಕು. ಸುಪ್ರೀಂ ಕೋರ್ಟಿನ ಕಾನೂನನ್ನು ವಿರೋಧ ಮಾಡಿದರೆ ಅದು ಬಹಳ ವ್ಯತಿರಿಕ್ತವಾಗುತ್ತದೆ. ಅಂತಹ ಸಂದರ್ಭವನ್ನು ಮೊಟಕು ಮಾಡುವುದಕ್ಕೋಸ್ಕರ ಈ ಬಗೆಯ ಬಿಲ್ಲನ್ನು ಸರ್ಕಾರ ಇಲ್ಲಿ ತಂದಿದೆಯೆಂದು ಮಾನ್ಯ ಶ್ರೀ ಕೃಷ್ಣನ್‌ನವರು ಹೇಳಿದರು. ಇನ್ನೊಂದು ಶಂಕೆಯನ್ನು ಹೇಳಿದ್ದಾರೆ. ಈ ಬಿಲ್ಲಿನಲ್ಲಿ 311ನೇ ಸೆಕ್ಷನ್ ಪ್ರಕಾರ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಒಂದು ಭಾಗ ವ್ಯತ್ಯಾಸ ಬರುತ್ತದೆಂದು ಅವರು ವ್ಯಕ್ತ ಮಾಡಿದ್ದಾರೆ 311 ಕ್ಲಾಜ್ (2)ರಲ್ಲಿ ಹೇಳಿರುವ ಪ್ರಕಾರ ಅಪ್ಲಿಕೇಷನ್ ಇದಕ್ಕೆ ಹೊಂದುವುದಿಲ್ಲ. ಏಕೆಂದರೆ, ಅಫಿಷಿಯೇಟಿಂಗ್‌ನಲ್ಲಿ ಯಾವುದೇ ಉದ್ದೇಶವೆಂಬುದು ಸ್ಪಷ್ಟವಾಗಿ 311ರೊಳಗೆ ಬರುವುದಿಲ್ಲ. ಅದನ್ನು ನಾನು ಸವಿಸ್ತಾರವಾಗಿ ಹೇಳುತ್ತೇನೆ. ಸರ್ಕಾರದವರು ಯೋಗ್ಯ ವೇಳೆಯಲ್ಲಿ ಪ್ರೋಮೋಷನ್ ಕೊಡದೆ ಅವರನ್ನು ಪ್ರಿವೆಂಟ್ ಮಾಡಿದ್ದಾರೆಂಬ ಮಾತು ತಪ್ಪು. ಅವರಿಗೆ ಅರಿಯರ್ಸ್ ಕೊಡದೇ ಇರುವುದು ತಪ್ಪು ಎಂಬುದಾಗಿ ಮಾನ್ಯ ಶ್ರೀ ಕೃಷ್ಣನ್ ಅವರು ಹೇಳಿದರು. ಮಾನ್ಯ ಶ್ರೀ ಕೃಷ್ಣನ್ ಅವರಿಗೆ ನಾನು ಸರ್ಕಾರದ ಪರವಾಗಿ

ಶ್ರೀ. ಡಿ. ಕೆ. ನಾಯ್ಕರ್

ಯಿಂದ ಹೇಳುವುದಾದರೆ, ಆ ರೀತಿ ಪ್ರಿವೆಂಟ್ ಮಾಡುವಂಥಾದನ್ನು ನಾವು ಮಾಡಲಿಲ್ಲವೆಂದು ಈಗಾಗಲೇ ಹೇಳಿದೆ. ಸರ್ಕಾರದ ಕಡೆಯಿಂದ ಏನೂ ಅನ್ಯಾಯವಾಗಿಲ್ಲ. ಯಾವ್ಯಾವದೋ ಕಾರಣಗಳಿಂದ ಫೈನಲ್ ಲಿಸ್ಟ್ ವಿಜಹಾಗಿ ತಡವಾಗಿದೆ, ಅದರ ಪರಿಣಾಮವಾಗಿ ಇವೆಲ್ಲವೂ ಆಗಿದೆ. ಆದ್ದರಿಂದ ಸರ್ಕಾರದವರು ಅವರಿಗೆ ಕೊಡುವಂಥ ಪ್ರೊಮೋಷನ್ಸನ್ನು ಪ್ರಿವೆಂಟ್ ಮಾಡಿ ಅದರಲ್ಲಿ ಸರ್ಕಾರ ಉಳಿಸಿಕೊಳ್ಳಬೇಕೆಂದು ಏನೂ ಪ್ರಯತ್ನ ಮಾಡಿಲ್ಲ. ಅದನ್ನು ಮಾನ್ಯ ಸದಸ್ಯರು ನಂಬಬೇಕು.

ಇನ್ನು ಮಾನ್ಯ ಶ್ರೀ ದೇವೇಗೌಡರು ಹೇಳುತಾ ಹೇಳುತಾ ಸರ್ಕಾರಕ್ಕೆ ಹಣವಿಲ್ಲ, ಪೇಮೆಂಟ್ ಮಾಡುವುದನ್ನು ಉಳಿಸಿಕೊಳ್ಳುವುದಕ್ಕೆ ಈ ಬಗೆಯ ಕಾನೂನನ್ನು ತಂದಿದ್ದಾರೆಂದು ಕಟುವಾಗಿ ಟೀಕೆ ಮಾಡಿದ್ದಾರೆ. ಆದರೆ ನಿಜವಾಗಿ ನೋಡಿದರೆ ಅದು ಅಷ್ಟೊಂದು ಸಮಂಜಸವಾಗಲಿಲ್ಲ. ಇದು ಸರಿಯಲ್ಲ. ನಾನು ಮಾನ್ಯ ಶ್ರೀ ದೇವೇಗೌಡರಿಗೆ ಒಂದು ಮಾತನ್ನು ಹೇಳುತ್ತಿದ್ದೇನೆ. ಹಣ ಕೊಡುವುದು ಅಷ್ಟೆ ಅಲ್ಲ. ವರ್ಕ್ ಮಾಡದೇ ಇದ್ದರೂ ನಾನು ಹೇಳಿದ ಹಾಗೆ ಯಾರಿಗೋ ಪ್ರೊಮೋಷನ್ ಮಾಡಿ ಅವರಿಗೆ ಕೊಟ್ಟಿದೆ.

ಶ್ರೀ ಎಂ. ಎಸ್. ಕೃಷ್ಣನ್ :....ಪ್ರೊಮೋಷನ್ ಯಾರಿಗೆ ಮಾಡಬೇಕಾಗಿತ್ತೋ ಆ ಮನುಷ್ಯನಿಗೆ ಸಿಕ್ಕಲಿಲ್ಲ. ಕೋರ್ಟಿಗೆ ಹೋಗಿ ತೀರ್ಮಾನ ಮಾಡಿದ್ದರೂ ಯಾರನ್ನೋ ಪ್ರೊಮೋಟ್ ಮಾಡುವುದು ಸರಿಯಲ್ಲ. ಇವರನ್ನು ಮಾಡಬೇಕಾಗಿತ್ತು. ಯಾರ ಪ್ರಯತ್ನದಿಂದ ಪ್ರೊಮೋಷನ್ ಕೊಟ್ಟಿದ್ದಾರೋ ಅವರು ಈಗ ಅಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಡಿ. ಕೆ. ನಾಯ್ಕರ್ : ಅದಕ್ಕೆ ನಮ್ಮದು ತಪ್ಪಲ್ಲ. ಅವರದೂ ತಪ್ಪಲ್ಲ.

ಶ್ರೀ ಎಂ. ಎಸ್. ಕೃಷ್ಣನ್ : ಮೂರಿ ಕಣ್ಣು ಹೋತ್ತನ ಮೇಲೆ ಎಂದು ಹೇಳಿದ ಹಾಗೆ ಇದೆ.

ಶ್ರೀ ಡಿ. ಕೆ. ನಾಯ್ಕರ್ : ಮಾನ್ಯ ಶ್ರೀ ಆರ್ಮುಗಂ ಅವರು ಡಿಂಡಿಗಲ್ ಚುನಾವಣೆಯ ವಿಚಾರವಾಗಿ ಮಾತನಾಡುತಾ ಕೇವಲ 500 ಓಟುಗಳನ್ನು ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿಲ್ಲವೆಂದು ಹೇಳಿದರು. ನಾನೂ ಸಹ ಅವರಿಗೆ ಅದೇ ರೀತಿಯಲ್ಲಿ ರಿಪೋರ್ಟ್ ಮಾಡಿ ಒಂದು ವಿಚಾರವನ್ನು ಹೇಳಬಹುದಾಗಿತ್ತು.

ಅವು ಒಂದು ಟೆಸ್ಟ್ ಐದ್ಯೆದು ವರ್ಷಗಳಿಗೊಮ್ಮೆ ಆ ತರಹ ಒಂದು ಚಾನ್ಸ್ ಬರುತ್ತದೆ. ಅದು ನಿಮಗೂ ಬರುತ್ತದೆ. ನಮಗೂ ಬರುತ್ತದೆ. ಸಧ್ಯಕ್ಕೆ ಆ ಚಾನ್ಸ್ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ : ನೀವು 5 ವರ್ಷಗಳು ಉಳಿದುಕೊಳ್ಳಿ. ಟೆಸ್ಟ್ ಆಮೇಲೆ.

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಈಗ ಒಂದು ವಿಷಯವನ್ನು ತಮ್ಮ ಮುಂದೆ ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಹಾಗೆ ಕಾನೂನನ್ನು ತಂದಾಗ್ಯೂ ಈ ಈ ಸಮಸ್ಯೆ ಸಂಪೂರ್ಣವಾಗಿ ಬಗೆಹರಿಸುವುದು ಸರಕಾರಕ್ಕೆ ಜವಾಬ್ದಾರಿ ಇದೆಯೆಂದು ಹೇಳಿದ್ದೇನೆ. ಈ ಸಂಬಂಧದಲ್ಲಿ ಮಾನ್ಯ ಸದಸ್ಯರಿಗೆ ಕಳಕಳಿಯಿಂದ ಹೇಳುವುದೇನೆಂದರೆ, ಈ ಕಾನೂನು ಬಂದನಂತರ ಯಾವತ್ತೂ ಸಂಬಂಧಪಟ್ಟ ಇಲಾಖೆ ಸರಕಾರದ ಆದೇಶದ ಮೇರೆಗೆ ಸೀನಿಯಾರಿಟಿ ಫೈನಲ್ ಲಿಸ್ಟ್ ಮಾಡಿ ಅದರ ಪ್ರಕಾರ ಪ್ರೊಮೋಷನ್ಸ್ ಮಾಡುವುದನ್ನು ಅನುಸರಿಸಬೇಕು ಈ ಸಮಸ್ಯೆ ಒನ್ಸ್ ಫಾರಾಲ್ ಮುಗಿಯಬೇಕೆಂದು ಈ ಬಿಲ್ಲನ್ನು ತಂದಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಅಲಾಟೀಸ್‌ಗೆ ಮಾತ್ರ ಪ್ರೊವಿಸನ್ ಮಾಡಿ ಅವರಿಗೆ ಅರಿಯರ್ಸ್ ಕೊಡದೆ ಆಲಾಟೀಸ್ ಬಿಟ್ಟು ಉಳಿದ ಸರ್ವೆಂಟ್ಸ್ ಏನಿದ್ದಾರೆಯೋ ಅವರೂ ಕೂಡ ಗ್ರೇಡೇಷನ್ ಲಿಸ್ಟ್ ಮಾಡಬೇಕಾಗಿದೆ. ಇದನ್ನು ಮಾಡುವಾಗ ಅಲ್ಲಿ ಏನಾದರೂ ಹೆಚ್ಚುಕಡಿಮೆಯಾದರೆ, ಅವರಿಗೆ ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಡುವುದಿದ್ದರೆ ಅದರಲ್ಲಿ ಡಿಸ್ಕ್ರಿಮಿನೇಷನ್ ಆಗಬಾರದು. ಸರಕಾರ ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನದಲ್ಲಿಟ್ಟುಕೊಂಡು ಮಾಡಿದ್ದನ್ನು ಸೆಕ್ಷನ್ 303 ಹಾಗೂ ಸೆಕ್ಷನ್ 304 ಕ್ಲಾಜುಗಳಲ್ಲಿ ಅಳವಡಿಸಿದೆ.

ಇದರ ತಾತ್ಪರ್ಯ ಇಷ್ಟೆ. ಇದರಲ್ಲಿರತಕ್ಕಂಥ ಸಮಸ್ಯೆಗಳನ್ನು ಒಂದೇ ಸಲ ಬಗೆಹರಿಸಲಿಕ್ಕೆ ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ್ದೇವೆ.

4-00 P.M.

ಇನ್ನು ಕೊನೆಯದಾಗಿ ಈ ಸೀನಿಯಾರಿಟಿ ಬಗ್ಗೆ ಕೆಲವು ಮಾನ್ಯ ಸದಸ್ಯರು ಮೆಡಿಕಲ್ ಡಿಪಾರ್ಟಮೆಂಟ್‌ನಲ್ಲಿ ಹಾಗೆ ಇದೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಹೀಗೆ ಇದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಆ ರೀತಿ ಹೇಳಿದಾಗ ಮಾನ್ಯ ಶ್ರೀಮಾನ್ ಹೆಚ್. ಸಿದ್ದವೀರಪ್ಪನವರು ಇವೆಲ್ಲಾ ಇನ್‌ಚಾರ್ಜ್ ಅರೇಂಜ್‌ಮೆಂಟ್ಸ್ ಹೊರತು ಬೇರೇ ಏನೂ ಅಲ್ಲ. ಇದು ಪ್ರಮೋಷನ್ಸ್ ಅಲ್ಲ ಫೈನಲ್ ಆಗಿ ಸೀನಿಯಾರಿಟಿ ಲಿಸ್ಟ್ ಆದಮೇಲೆ ಅದನ್ನು ಸರಿಪಡಿಸುತ್ತೇವೆ ಎಂದು ಹೇಳಿದರು. ಅದೇ ರೀತಿಯಾಗಿ ನಾನೂ ಕೂಡ ಈ ಕಾನೂನು ಜಾರಿಗೆ ಬಂದಮೇಲೆ ಆ ಬೇಸಿಸ್ ಮೇಲೆ ಈ ಡಿಪಾರ್ಟ್‌ಮೆಂಟಿನ ಸೀನಿಯಾರಿಟಿ ಲಿಸ್ಟ್ ಮತ್ತು ಅವರವರ ಕೇಡರ್ ಅಂಡ್ ಕೆಟ್ಯಾ

(ಶ್ರೀ ಡಿ. ಕೆ. ನಾಯಕರ್)

ಟ್‌ಮೆಂಟ್ ರೂಲ್ಸ್‌ಗನುಗುಣವಾಗಿ ಒಂದು ಫೈನಲ್ ಲಿಸ್ಟ್ ಮಾಡಿದ ಮೇಲೆ ಪ್ರಮೋಷನ್ ಮಾಡುತ್ತೇವೆ. ಆದುದರಿಂದ ಮಾನ್ಯ ಸದಸ್ಯರು ಈ ಬಿಲ್ಲನ್ನು ಪಾಸ್ ಮಾಡಲಿಕ್ಕೆ ಸಂಪೂರ್ಣ ಬೆಂಬಲವನ್ನು ನೀಡಬೇಕೆಂದು ಹೇಳುತ್ತೇನೆ. ಅಲ್ಲದೆ ಅವರು ಕೊಟ್ಟಂಥ ಅಮೂಲ್ಯವಾದ ಸಲಹೆಗಳಿಗೆ ಅವರಿಗೆ ಕೃತಜ್ಞತೆಯನ್ನು ಅರ್ಪಿಸಿ ಮತ್ತೊಮ್ಮೆ ಈ ಸಂದರ್ಭವನ್ನು ಒದಗಿಸಿಕೊಟ್ಟಿದ್ದಕ್ಕಾಗಿ ತಮಗೂ ಕೂಡ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

MR. DEPUTY SPEAKER.-I will now put the consideration motion to the vote of the house. The question is:

"That the Mysore State Civil Services (Regulation of promotion, pay and pensions) Bill, 1973 be taken into consideration."

The motion was adopted

MR. DEPUTY SPEAKER.—There is one notice of a motion by Sri M. S. Krishnan for referring the Bill to a Joint Select Committee. He may move his motion.

SRI. M. S. KRISHNAN— All of us have signed it Sir Mr. Deve Gowda also has signed it.

I beg to move the following motion under Rule 74 (1) of the Rules of Proceedure

"That the Mysore State Civil Services (Regulation of promotion, pay and pensions) Bill 1973 be referred to a Joint Select Committee consisting of a total number of twelve members, nine from the Assembly and three from the Council and that the concurrence of the Legislative Council be obtained therefor, and that the following members of this House shall be members of the Joint Select Committee:

Sri D. K. Naikar, Minister for Law
,, C. M. Armugam,

,, M. Veerappa Moily,
,, K. Sriramulu,
,, H. D. Devegouda,
,, M. S. Krishnan,
,, Kagodu Thimmappa,
,, B. B. Sayanak,
,, M. M Sajjan,
,, P. C. Shettar.

MR. DEPUTY SPEAKER :—Motion moved :

"That the Mysore State Civil Services (Regulation of promotion, pay and pension) Bill 1973 be referred to a Joint Select Committee consisting of a total number of twelve members, nine from the Assembly and three from the Council and that the concurrence of the Legislative Council be obtained therefor, and that the following members of this House shall be members of the Joint Select Committee:

Sri. D. K. Naikar, Minister for Law
,, C. M. Armugam,
,, M. Veerappa Moily,
,, K. Sriramaulu,
,, H. D. Devegouda,
,, M. S. Krishnan,
,, Kagodu Thimmappa,
,, B. B. Sayanak,
,, M. M. Sajjan,
,, P. C. Shettar."

SRI M. S. KRISHNAN :—Sir, I am moving this motion because I was fondly hoping that there may be no necessity for this if the Minister had conceded at least some of the points which we had raised during the discussion. Unfortunately, the Minister has not conceded even a single point. On the other hand, he has tried to support whatever he has said as

(SRI M. S. KRISHNAN)

usual. Therefore, I and the Hon. Leader of the opposition, Sri Devegowda have been forced to move this amendment for three or four reasons. Even from what the Minister has said, there are several aspects of it about which there is controversy. On the one side, the opposition feels very strongly that there are certain clauses in the Bill which are are not in consonance with the Constitution. Of course, he did not refer to article 3ll and 309. He said that it does not attract article 311. He said that officiating is a temporary placement and it is not a reduction.

SRI D.K. NAIKAR: No right or title will accrue to the officiating persons.

SRI M.S. KRISHNAN :—First of all, the wording of this Bill speaks of promotion. The whole approach is a civil servant has been promoted by virtue of the provi sional seniority list and he has been functioning there for some time. It is considered to be officiating. My submission is that this is not officiating ; it is actually functioning in that place for 2, 3, 4 years and from that position he is removed again.

MR. DEPUTY SPEAKER :—The motion is so clear that it does not require any clarification.

SRI M. S. KRISHNAN :—I thought I could convince the Minister. Now the position is this : I think there are certain controversial questions in this. That is why I press that this matter should be referred to Joint Select Committee. One very controversral question is.

SRI D.K. NAIKAR :—This bill is identical to the Bill introduced in the Punjab and almost all the directions carried out by the Punjab Govenment have been adopted in our Government. These directions have also been tested in the Supreme Court. They have been upheld

by the Supreme Court in 1962. Please do not have any doubt about the legal veracity of these provisions.

SRI M. S. KRISHNAN :— The Hon. Minister says that there has been similar Bill in the Punjab and it has been tested in the Supreme Court. I am not conversant with the Punjab Bill and also the Supreme Court decision. So I am not competent to answer. But I do take what he has stated. But even from the point of view ot convincing the opposition and taking us along with them, probably, it would not do any harm either to the State or to the interest of any body or the exchequer. if this Bill is referred to a Joint Select Committee, where this matter can be gone into in detail. According to me, it is not a small matter: it is a vital matter for us.

SRI H. S. SIDDAPPA :— When the Supreme Court up held the Punjab High Court Judgement, the Judges of the Supreme Court were different at that time.

SRI M. S. KRISHNAN :— I do not know who were the judges. The second question is, he referred to article 16 and he has referred to some cases which have been decided in that regard.

SRI D. K. NAIKAR : - Please note - 1962 - Supreme Court P-41.

SRI M. S. KRISHNAN——A controversy has arisen in regard to the position of a person who has got promotion by virtue of the High Court or Supreme Court decision. The position in regard to promotion is that Government itself admits that he has been promoted. The only point is whether he should get arrears or not. To that the answer given is that arrears need not be given on two counts. One is that he did not work and the other is lack of finance. According to me, both are not justifiable. I am not really convinced by the statement that Government is paying to a person who has not worked. The man did

(SRI M. S. KRISHNAN)

not work because he was forced not to work by the Government. If he had been permitted to work, he would have worked Under the circumstances to say that he has not worked and so he is not entitled to arrears is not correct and justifiable morally and legally. Legal it has been decided in favour of the Government servants and not in favour of Government. The Government wants to get out of that legal position by means of this Act. Let this Bill go to a Joint Select Committee and discussed threadbare and let us know how many cases there are and what is the financial implication to the State, and let us find out how to find that money. Under the Payment of Bonus Act, the workers are paid in National Savings Certificate over and above a certain percentage. A similar thing could be done in this case also or some other method could be found to pay the money due to Government servants in instalments. These are matters of detail which can be gone into in the Joint Select Committee.

I cannot understand the question of lack of finance when the Government has got money to pay for so many other things. For instance, they are prepared to pay lakhs and lakhs to the Rayanakere Farm and to the mahavatak but they are not prepared to do justice to class III and class IV people. I am not fighting for the highest official though they may also get the benefit. I think it is very correct that they should be paid and money should not be the consideration. Under these circumstances, the approach of the Government itself is wrong. These points should be discussed and that is why it should go to the Select Committee.

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ಸನ್ಮಾನ್ಯ ಉಪಾಧ್ಯಕ್ಷರೇ, ಇಂಟರ್ ಸ್ಟೇಟ್ ಸೀನಿಯಾರಿಟಿ ಬಗ್ಗೆ ಸರ್ಕಾರದವರು ತಂದಿರತಕ್ಕ ಮಸೂದೆಗೆ ಕೆಲವು ಮಂಡನೆಗಳನ್ನು ಮಾನ್ಯ ಕೃಷ್ಣನ್ ಮತ್ತು ಇತರ ಸ್ನೇಹಿತರು ತಂದಿರುವುದನ್ನು ಅನುಮೋದನೆ ಮಾಡುತ್ತ ಅದರ ಬಗ್ಗೆ ಎರಡು ಮಾತು ಹೇಳಲು ಅಪೇಕ್ಷೆ ಪಡುತ್ತೇನೆ. 1956ನೆ ಇಸವಿಯಲ್ಲಿ ರಾಜ್ಯ ದೊಡ್ಡದಾದ

[illegible] ಸರ್ಕಾರದಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳ ಸೀನಿಯಾರಿಟಿ ಬಗ್ಗೆ ಎಂದು ಇತಿಶ್ರೀ ಹಾಡಬೇಕೆಂದು, ಕೊನೆಯನ್ನು ಮುಟ್ಟಬೇಕು ಎನ್ನುವ ಘನ ಉದ್ದೇಶದಿಂದ ಸರ್ಕಾರದವರು ಈ ಮಸೂದೆಯನ್ನು ತಂದಿದ್ದಾರೆ, ಇದನ್ನು [illegible]ವಾಗ ಅವಸರದಲ್ಲಿ ಅನೇಕ ಸಣ್ಣಪುಟ್ಟ ಅಧಿಕಾರಿ ವರ್ಗದವರಿಗೆ ಇದರಿಂದ ತೊಂದರೆಯಾಗಿದೆ. ಆಗಿನ ಕಾಲದಲ್ಲಿ ಉನ್ನತ ಸ್ಥಾನದಲ್ಲಿರುವ ಅಧಿಕಾರಿಗಳು ಪ್ರಭಾವವನ್ನು ಬೀರಿ ಅವರು ಅದರ ಉಪಯೋಗವನ್ನು ಪಡೆದುಕೊಂಡಿದ್ದಾರೆ. ಆದರೆ ಯಾವ ಒಂದು ಪ್ರಭಾವವನ್ನು ಸಹ ಮಾಡುವುದಕ್ಕೆ ಆಗದೆ ಇರತಕ್ಕ ವ್ಯಕ್ತಿಗಳು ಅನೇಕ ಜನ ದೇಶಕ್ಕೋಸ್ಕರ ಸೇವೆ ಮಾಡಿ ತಮ್ಮ ಕಾರ್ಯವನ್ನು ದೇಶಕ್ಕೋಸ್ಕರ ಮುಡುಪಾಗಿಟ್ಟಂಥ, ನಿಷ್ಕಲವಾದ ಸೇವೆಯನ್ನು ಮಾಡಿದಂಥ ಅನೇಕ ಅಧಿಕಾರಿಗಳಿಗೆ ಇನ್ನೂ ಅನ್ಯಾಯವಾಗಿದೆ ಎನ್ನುವುದನ್ನು ಈ ಸಭೆ ಮನಗಂಡಿದೆ. ಇಂಥ ಕಾಲದಲ್ಲಿ ಸರ್ಕಾರ ಐದು ಕೋಟಿ ರೂಪಾಯಿ ಅಂದಾಜು ಮಾಡಿ ಆ ಹಣವನ್ನು ಕೊಡುವುದಕ್ಕಾಗುವುದಿಲ್ಲವೆನ್ನತಕ್ಕ ಮೂಲ ಉದ್ದೇಶವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಇದನ್ನು ಸರ್ಕಾರ ಲಘುವಾಗಿ ತೆಗೆದುಕೊಳ್ಳ ಬಾರದು. ಮೊನ್ನೆ ತಾನೇ ನಾವು ನೋಡಿದ ಹಾಗೆ ಕೃಷಿಕರ ಋಣ ಪರಿಹಾರಕ್ಕೋಸ್ಕರ ಒಂದು ಕಾನೂನನ್ನು ಅಂಗೀಕಾರ ಮಾಡಿದೆವು. ಯಾರು ದೇಶಕ್ಕೋಸ್ಕರ ದುಡಿದಂಥ ಅಧಿಕಾರಿಗಳಿದ್ದಾರೆ, ಅವರ ಋಣ ಪರಿಹಾರ ಮಾಡ ತಕ್ಕ ಈ ಮಸೂದೆಯನ್ನು ತಂದು ಅವರಿಗೆ ಕೊಡತಕ್ಕ ಹಣವನ್ನು ಕೊಡದೆ ಇರುವ ಹಾಗೆ ಮಾಡಿದರೆ ಕೆಲಸ ಮಾಡಿದಂಥ ಜನತೆಗೆ ಅನ್ಯಾಯ ಮಾಡಿದ ಹಾಗೆ ಆಗುವುದಿಲ್ಲವೇ ? ಇದಕ್ಕೆ ನಾವು ಹೊಣೆಯಲ್ಲ. ಕೇಂದ್ರ ಸರ್ಕಾರ ಹೊಣೆ ಎನ್ನುವ ರೀತಿಯಲ್ಲಿ ಮಾನ್ಯ ಮಂತ್ರಿಗಳು ಹೇಳಿದರು. ಕೇಂದ್ರ ಸರ್ಕಾರದವರು ಇಂಟರ್‌ಸ್ಟೇಟ್ ಸೀನಿಯಾರಿಟಿ ಪಟ್ಟಿ ಬಗ್ಗೆ ನಿಧಾನ ಮಾಡಿದ್ದರೆ ಅವರಿಂದ ಹಣವನ್ನು ತೆಗೆದುಕೊಳ್ಳಿ. ಆದುದರಿಂದ ಸರ್ಕಾರ ಅವಸರದ ಕ್ರಮ ತೆಗೆದು ಕೊಳ್ಳದೆ ಇದನ್ನು ಜಂಟೀ ಸಲಹಾ ಸಮಿತಿಯವರು ಪರಿಶೀಲನೆ ಮಾಡುವುದಕ್ಕೆ ಸರ್ಕಾರದವರು ಒಪ್ಪಿಕೊಳ್ಳಬೇಕು ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ. ಅವಸರದ ಕ್ರಮ ತೆಗೆದುಕೊಳ್ಳಬಾರದು, ಇದರಿಂದ ಅನೇಕ ಜನ ಅಧಿಕಾರಿಗಳಿಗೆ, ನಿರಪರಾಧಿ ಅಧಿಕಾರಿಗಳಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಮಾನ್ಯ ಸ್ನೇಹಿತರು ತಂದಿರುವ ಸೂಚನೆಯನ್ನು ಒಪ್ಪಿಕೊಂಡು ಈ ಮಸೂದೆಯನ್ನು ಜಂಟೀ ಸಲಹಾ ಸಮಿತಿಗೆ ಕಳುಹಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ ಕೆ. ನಾಯ್ಕರ್ :—ಶ್ರೀ ಮಂಜುನಾಥ ಅವರು ಹೇಳಿದ ಹಾಗೆ ಕೇಂದ್ರ ಸರ್ಕಾರದವರದು ತಪ್ಪಿದೆ ಎಂದು ನಾನು ಹೇಳಿಲ್ಲ. ಅವರು ಅಪಾರ್ಥ ಮಾಡಿಕೊಂಡಿದ್ದಾರೆ, ಫೈನಲ್ ಸೀನಿಯಾರಿಟಿ ಪಟ್ಟಿಯನ್ನು ಅಂಗೀಕಾರ ಮಾಡುವ ಹೊಣೆ ಕೇಂದ್ರ ಸರ್ಕಾರದ್ದು ಇತ್ತು. ಆ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಸಮಿತಿಗಳ ಮುಖಾಂತರ ಆಕ್ಷೇಪಣೆಗಳೇನಾದರೂ

(ಶ್ರೀ ಡಿ. ಕೆ. ನಾಯಕರ್)

ಇದ್ದರೆ ಕೊಡಬಹುದು ಎಂದು ಹೇಳಿ ಮತ್ತು ಹೈಕೋರ್ಟಿನಿಂದ ಇದರ ಬಗ್ಗೆ ಕೊಟ್ಟಿದ್ದ ಸ್ಟೇ ವೇಕೆಟ್ ಆದನಂತರ ಎಲ್ಲ ಪೂರ್ತಿಯಾಗಿ, ಪ್ರೊಸೀಜರಲ್ ಮ್ಯಾಟರ್ಸ್‌ನಿಂದ ನಿಧಾನವಾಗಿದೆ. ಯಾರ ತಪ್ಪಿನಿಂದಲೂ ಆಗಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಕೃಷ್ಣನ್ ಅವರು ಹೇಳಿದ ಹಾಗೆ ಸೀನಿಯಾರಿಟಿ ಪಟ್ಟಿ ತಯಾರು ಮಾಡುವುದರಲ್ಲಿ ವಾಯಿದೆ ಕೊಡಬೇಕಾದುದನ್ನು ಹೆಚ್ಚು ಕೊಟ್ಟಿದ್ದಾರೆ, ಇದರಿಂದ ಹಣ ಕೊಡಬೇಕಾದುದನ್ನು ಕೊಡಬಾರದು ಎನ್ನುವುದು ತಪ್ಪು, ಅದನ್ನು ಪರಿಶೀಲನೆ /ಮಾಡುವುದಕ್ಕೆ ಸೆಲೆಕ್ಟ್ ಕಮಿಟಿಗೆ ಹೋಗಬೇಕು ಎನ್ನುವ ವಾದವನ್ನು ಹೇಳುತ್ತಿದ್ದರು.

ನಾನು ಅವರಿಗೆ ಇಷ್ಟೇ ಹೇಳುತ್ತಿದ್ದೇನೆ, 'ಏನೆಂದರೆ ಪ್ರೋವಿಜನಲ್ ಲಿಸ್ಟ್ ಪ್ರಕಾರ ಸೀನಿಯಾರಿಟಿ ಇದ್ದಂಥ "ವೈ" ಎಂಬ ಅಧಿಕಾರಿಗೆ ಪ್ರಮೋಷನ್ ಕೊಟ್ಟಿರುತ್ತೇವೆ. ಮುಂದೆ ಫೈನಲ್ ಲಿಸ್ಟ್ ತಯಾರಾದ ಮೇಲೆ "ಎಕ್ಸ್" ಎಂಬ ಇನ್ನೊಬ್ಬ ಅಧಿಕಾರಿ ಫೈನಲ್ ಸೀನಿಯಾರಿಟಿ ಲಿಸ್ಟ್‌ನ ಪ್ರಕಾರ "ವೈ" ಸ್ಥಾನ ತನಗೇ ಬರಬೇಕಾಗಿತ್ತು, ತಾರತಮ್ಯವಾಗಿದೆ ಎಂದು ಹೇಳಿದರೆ "ಎಕ್ಸ್"ಗೆ ಯಾವ ಅರ್ಹತೆಯ ಮೇಲೆ ಪ್ರಮೋಷನ್ ಕೊಡುವುದಕ್ಕಾಗುತ್ತದೆ! ಫೈನಲ್ ಲಿಸ್ಟ್‌ನಲ್ಲಿ ತನ್ನ ಹೆಸರು ಮೇಲೆ ಬಂದಿದೆ, ಅದರ ಒಂದು ಪರಿಣಾಮವಾಗಿ ಹಿಂದಿನಿಂದ ಅರಿಯರ್ಸ್ ಕ್ಲೈಂ ಮಾಡುತ್ತೇನೆಂದು ಹೇಳಿದರೆ, ಕಾನೂನು ಪ್ರಕಾರ ಅರಿಯರ್ಸ್ ಕೊಡುವುದಕ್ಕಾಗುವುದಿಲ್ಲವೆಂದು ಈ ಸ್ಟೇಟ್‌ಮೆಂಟಿನಲ್ಲಿ ಹೇಳಿದೆ. ಆದ್ದರಿಂದ ಈ ವಿಚಾರವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಬೇಕೆಂಬ ವಾದದಲ್ಲಿ ಹುರುಳಿಲ್ಲವೆಂದು ಹೇಳುತ್ತೇನೆ. ಮುಖ್ಯವಾಗಿ ಈ ಪ್ರಾವಿಜನ್‌ಗಳು ಸುಪ್ರೀಂ ಕೋರ್ಟಿನ ತೀರ್ಮಾನಕ್ಕೆ ಅನುಗುಣವಾಗಿರುವುದರಿಂದ ಅದನ್ನೇ ನಾವು ಅನುಸರಿಸುತ್ತಿದ್ದೇವೆ. ಆದ್ದರಿಂದ ಇದರಲ್ಲಿ ತಾರತಮ್ಯಕ್ಕೆ ಆಗಲೀ, ಭಿನ್ನಾಭಿಪ್ರಾಯಕ್ಕೆ ಆಗಲೀ, ಅವಕಾಶವಿಲ್ಲದಿರುವುದರಿಂದ ಅವರ ಸೂಚನೆಯನ್ನು ತಳ್ಳಿಹಾಕಬೇಕೆಂದು ಹೇಳುತ್ತೇನೆ.

MR. DEPUTY SPEAKER : The question is :

That the Mysore State Civil Services (Regulation of Promotion, Pay and Pension) Bill, 1973, be referred to a Joint Select Committee, consisting of a total number of twelve numbers, nine from the Legislative Assembly and three from the Legislative Council that

and the concurrence of the Legislative Council be obtained therefor and that the following members of this House shall be members of the Joint Select Committee : *viz.*

SRIYUTHS : D. K. Naikar, Minister for Law
C. M. Armugam
M. Veerappa Moily
K. Sriramulu
H. D. Deve Gowda
M. S. Krishnan
Kagodu Thimmappa
B. B. Sayanak
M. M. Sajjan
P. C. Shettar

The motion was negatived

Clause—2

DEPUTY SPEAKER : I will put clause by clause. Clause-2. There are no amendments. The question is :

"That clause-2 do stand part of the Bill". The motion was adopted clause-2 was added to the bill.

The motion was adopted Clause 2 was added to the bill.

Clause—3

DEPUTY SPEAKER

Clause—3

There is an amendment by Sri M. S. Krishnan.

SRI M. S. KRISHNAN : I move :

"That for sub-clause (1) (a) substitute the following :

Ordinarily be entitled to promotion any post or office with effect from a retrospective date, unless the High Court, Supreme Court or any other judicial authority has decided that retrospective effect be given".

(SRI M. S. KRISHNAN)

"In sub-clause (1) (b) for the words "unless the said............... ... his officiation" substitute the following.—

"unless his work has been found unsatisfactory during the period of the promotion and disciplinary action has been taken in this regard."

MR. DEPUTY SPEAKER : Amendment moved :

"That for sub-clause (1) (a) substitute the following:

"Ordinarily be entitled to promotion any post or office with effect from a retrospective date, unless the High Court , Supreme Court or any other judicial authority has decided that retrospective effect be given."

In sub-clause (1) (a) for the words "unless the said .... his officiation" substitute the following:

"unless his work has been found unsatisfactory during the period of the promotion and disciplinary action has been taken in this regard."

‡ SRI M. S. KRISHNAN .

The whole purpose in moving this amendment is, if the High Court or Supreme Court or any other court has specifically stated promotion be given with retrospective effect and arrears of pay etc., be given from any particular date, that decision has to be implemented. I have already spoken on this question and I believe it is not correct on the part of the Government to deny this because a civil servant who has gone to the High Court will have spent a lot of money. It will be a question of demoralisation of the entire state apparatus, Secondly, my plea is that it poses a serious danger if we agree to the provision mentioned in the Bill, because the same provision can be used for any other purpose also. · I am sure the Government if it were to be democratic and help the

common man, cannot bring in such a law. Once they bring in such a law, it can be applied to industrial employees also because there is no bar and power is there in the concurrent list. They can bring in an amendment to the Industrial Disputes Act and it will be a most retrograde step. That is why I have moved this amendment.

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ) : ಮಾನ್ಯ ಉಪಾಧ್ಯಕ್ಷರೇ. ಮಾನ್ಯ ಕೃಷ್ಣನ್ ಅವರು ತಂದಿರುವ ತಿದ್ದುಪಡಿಯನ್ನು ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗಿನ ಕಾಲವಲ್ಲಿ ಕೋರ್ಟಿಗೆ ಹೋಗಿ ನ್ಯಾಯವನ್ನು ಪಡೆದ ಜನರು ಎಷ್ಟು ಶ್ರಮಪಟ್ಟಿರುತ್ತಾರೆ, ಎಷ್ಟು ನೊಂದಿರುತ್ತಾರೆ ಎಂಬ ಅನುಭವ ಎಲ್ಲರಿಗೂ ಇದೆ. ಕೋರ್ಟಿಗೆ ಹೋದವರು ದುಬಾರಿ ಹಣವನ್ನು ಖರ್ಚು ಮಾಡಿರುವುದೇ ಅಲ್ಲದೆ, ಮಾನಸಿಕವಾಗಿಯೂ ಸಹ ನೊಂದಿರುತ್ತಾರೆ. ಕೋರ್ಟಿನಲ್ಲಿ ನ್ಯಾಯವನ್ನು ಪಡೆದವರಿಗೆ ತಾವು ಪರಿಹಾರವಾಗಿ ಹಣವನ್ನು ಕೊಟ್ಟರೂ ಸಹ, ಅದು ಸಾಲದು . ಏಕೆಂದರೆ ತಾವು ಏನು ಪರಿಹಾರ ಎಂದು ಕೊಡುತ್ತೀರೊ, ಆ ಪರಿಹಾರದ ಹಣಕ್ಕಿಂತ ಹೆಚ್ಚು ಹಣವನ್ನು ಅನೇಕ ಸಂದರ್ಭಗಳಲ್ಲಿ ಅವರು ವ್ಯಾಜ್ಯಕ್ಕಾಗಿ ಖರ್ಚು ಮಾಡಿರುತ್ತಾರೆ ಯಾರು ತಮಗೆ ಅನ್ಯಾಯವಾಗಿದೆ ಎಂದು ಭಾವಿಸುತ್ತಾರೋ ಅಂತಹವರು ಕೊನೆಗೆ ಕೋರ್ಟಿಗೆ ಹೋಗುತ್ತಾರೆ. ಕೋರ್ಟಿನವರಾದರೂ ತಮ್ಮ ರಕ್ಷಣೆಗೆ ಬಂದರು, ತಮ್ಮ ಹಕ್ಕನ್ನು ಎತ್ತಿಹಿಡಿದರು ಎಂಬ ತೃಪ್ತಿಯ ಉಸಿರನ್ನು ಬಿಡುವ ಕಾಲಕ್ಕೆ, ನೀವು ಅದನ್ನು ನೆಲಸಮ ಮಾಡಿ ಕೋರ್ಟಿನ ತೀರ್ಮಾನವನ್ನು ಅಲ್ಲಗಳೆಯುವ ಪ್ರಯತ್ನವನ್ನು ಮಾಡುವುದಕ್ಕೆ ಏನು ಹೊರಟಿದ್ದೀರಿ, ಅದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ ಮತ್ತು ಮಾನ್ಯ ಕೃಷ್ಣನ್ ಅವರ ಈ ತಿದ್ದುಪಡಿಗೆ ನನ್ನ ಪೂರ್ಣ ಬೆಂಬಲವನ್ನು ಕೊಡುತ್ತೇನೆ.

‡ SRI D. K. NAIKAR : In respect of the amendment brought by Sri Krishnan I would only point out that section 3 refers to civil servants whose promotions are guided on the basis of gradation list and it does not refer to promotion inrespect of allottees. Section 4 relates to promotion of allottees. We have not made provision for allottees to get retrospective promotion. Such being the case, it would amount to discrimination and it is not proper also.

Mr. Detuty Speaker : I will put the amendment to the vote of the House. The question is :—

"That for sub-clause (1) (a) substitute the following:

"Ordinarily be entitled to promotion to any post or office with effect from a retrospective date, unless the High Court, Supreme Court, or any other judicial authority has decided that retrospective effect be given.

In sub-clause (1) (b) for the words 'unless the said .... his officiation" substitute the following:—

'unless his work has been found unsatisfactory during the period of the promotion and disciplinary action has been taken in this regard,'

The amendment was negatived

Mr. Deputy Speaker : The question is :

That clause 3 do stand part of the Bill

The motion was adopted.

Clause 3 was added to the Bill

4-30 p. m.

Clause-4

Mr. Deputy Speaker : There are amendments by Mr. M. S. Krishnan.

Sri M. S. Krishnan : Sri, I move the following amendments :

"In sub-clause (1) delete "officiate in" as well as "with effect from a prospective date to be specified in the order":

In sub-clause (2) for the words "but such person shall not be entitled to payment of any arrears for the period prior to the date of his actual promotion.

Substitute "but such person shall be entitled to payment of arrears for the period for which he is entitled to".

In sub-clause (3) delete "but he shall not be entitled to payment of any arrears for the period prior to the date of his actual promotion".

In sub-clause (3) substitute "but he shall not be entitled to payment of any arrears .... actual promotion", by "shall be paid arrears if any he is entitled to".

The following new clause as clause 4(a) shall be added after clause 4.

"4(A) Those Civil Servants who are entitled to arrears by virtue of a decision of a court or authority shall be paid the same either in a lumpsum or in instalments as the Government deems necessary".

MR. DEPUTY SPEAKER: Amendments moved

"That in sub-clause (1) delete "officiate in" as well as "with effect from a prospective date to be specified in the order".

In sub-clause (2) for the words "but such person shall not be entitled to payment of any arrears for the period prior to the date of his actual promotion".

Substitute "but such person shall be entitled to payment of arrears for the period for which he is entitled to".

(MR. DEPUTY SPEAKER)

In sub-clause (3) delete "but he shall not be entitled to payment of any arrears for the period prior to the date of his actual promotion".

In sub-clause (8) substitute "but he shall not be entitled to payment of any arrears ... . actual promotion" by "he shall be paid arrears if any he is entitled to".

The following new clause as clause 4(a) shall be added after clause 4.

"4 (A) Those Civil Servants who are entitled to arrears by virtue of a decision of a court or authority shall be paid the same either in a lumpsum or in instalments as the Government deems necessary"

‡ SRI M. S. KRISHNAN : In sub-clauses (1), (2), (3) and (8) all of them convey the same idea, *viz.* that arrears need not be paid. But we have been urging upon the Government that arrears should be paid. Hence, I have moved the amendments to the said sub-clauses.

Then I have also suggested insertion of a new clause *i.e.*, clause 4(A) in order to accommodate the Government realising its financial difficulties. This amendment suggests that the arrears could be paid either in lumpsum or in instalments. This is a sort of a compromise amendment and I hope it will be acceptable to the Government. Sir, the Government has paid already arrears in several cases and now they plead their difficulty. I have taken into consideration the financial difficulties of the Government as well as the justice to be meeted to the employees. I hope the Government will accept it.

SRI D. K. NAIKAR : I can only say that the amendments proposed by Hon. Member Sri Krishnan are not consistent with the concept of the main Bill and hence I cannot accept them.

MR. DEPUTY SPEAKER: Now, I will put all the amendments to the vote of the House. The question is:

"That in sub-clause (1) delete "officiate in" as well as "with effect from a prospective date to be specified in the order".

In sub-clause (2) for the words "but such person shall not be entitled to payment of any arrears for the period prior to the date of his actual promotion".

Substitute "but such person shall be entitled to payment of arrears for the period for which he is entitled to".

In sub-clause (3) delete "but he shall not be entitled to payment of any arrears for the period prior to the date of his actual promotion".

In sub-clause (8) substitute "but he shall not be entitled to payment of any arrears ....actual promotion" by "he shall be paid arrears if any he is entitled to".

The following new clause as 4(A) shall be added after clause 4:

"4(A) Those Civil Servants who are entitled to arrears by virtue of a decision of a court or authority shall be paid the same either in a lumpsum or in instalment as the Government deems necessary".

The motion was negetived

MR. DEPUTY SPEAKER: The question is:

"That clause 4 do stand part of the Bill"

The motion was adopted

(MR. DEPUTY SPEAKER)

Clause 4 was added to the Bill

CLAUSE 5 TO 13

MR. DEPUTY SPEAKER : The question is :

"That clauses 5 to 13, both inclusive, do stand part of the Bill".

The motion was adopted

"Clauses 4 to 13 both inclusive, were added to the Bill.

CLAUSE 1 ETC.

MR. DEPUTY SPEAKER : The question is :

" That clause 1 the long Title and the preamble Enacting Formula do stand part of the Bill".

SRI H. D. DEVE GOWDA : Sir I press for a division.

The House Divided

MR. DEPUTY SPEAKER . The result of the division is:

Ayes — 45
Noes — 15

The "Ayes" have it

The motion was adopted

Clause 1, long Title the preamble and Enacting Formula were added to the Bill.

Motion to pass

SRI D. K NAIKER : I move :

"That the Mysore State Civil Servants (Regulation of Promotion, Pay and Pension) Bill, 1973 be passed"

MR. DEPUTY SPEAKER : The question is :

SRI H. D. DEVE GOWDA : Sir, before you put the motion to the vote of the House I want to make a statement.

ಇವತ್ತು ಏನೊಂದು ಈ ವಿಧೇಯಕವನ್ನು ತಂದು ಸಂಖ್ಯಾಬಲದ ಆಧಾರದ ಮೇಲೆ ಪಾಸ ಮಾಡಿಕೊಳ್ಳತಕ್ಕಂತಹ ಉದ್ಧಟತನದ ಹವ್ಯಾಸಕ್ಕೆ ಹೊರಟಿದ್ದೀರಿ ಅದರಿಂದ ನೌಕರರು ಕೋರ್ಟಿಗೆ ಹೋಗಿ ನ್ಯಾಯ ಪಡೆಯುವುದಕ್ಕೆ ತಡೆ ಹಾಕಿದ್ದೀರಿ. ಇಂಥ ಕರಾಳ ಶಾಸನ ತರುವ ಸರ್ಕಾರದ ನೀತಿಯ ವಿರುದ್ಧ ಪ್ರತಿಭಟನೆ ಮಾಡಿ ನಾವು ಸಭಾತ್ಯಾಗವನ್ನು ಮಾಡುತ್ತೇವೆ.

MR. DEPUTY SPEAKER :—The question is :

"That the Mysore State Civil Services (Regulation of promotion, pay and pension) Bill, 1973, be passed."

The Motion was adopted and the Bill was passed.

MYSORE STATE AGRICULTURAL UNIVERSITIES BILL, 1973, MOTION TO CONSIDER.

SRI K. H. PATIL :—(Minister for Agriculture and Forests) : Sir, I beg to move :—

"That the Mysore State Agricultural Universities Bill, 1973, be taken into consideration.

MR. DEPUTY SPEAKER :—Motion moved :—

"That the Mysore State Agricultural Universities Bill, 1973, be taken into consideration"

ಶ್ರೀ ಕೆ. ಎಚ್. ಪಾಟೀಲ್ :—ಮಾನ್ಯ ಸಭಾಪತಿಗಳೆ, ಇಂದು ಮೈಸೂರು ರಾಜ್ಯದ ಅಗ್ರಿಕಲ್ಚರಲ್ ಯುನಿವರ್ಸಿಟಿ ಬಿಲ್ಲನ್ನು ಈ ಸದನದಲ್ಲಿ ಮಂಡಿಸುವುದಕ್ಕೆ ಸಂತೋಷ ಮತ್ತು ಅಭಿಮಾನ ಪಡುತ್ತೇನೆ. ಕೆಲವು ದಿವಸಗಳ ಹಿಂದೆ ಬಿಲ್ಲನ್ನು ಸರಿಯಾದ ರೀತಿಯಲ್ಲಿ ಓದಲಾರದೆ ಅಥವಾ ಸರ್ಕಾರದ ಅಭಿಪ್ರಾಯವೇನೆಂಬು